# ಅಪರಂಜಿ

ತಿಳಿನಗೆಯ ಕಾರಂಜಿ

ನವೆಂಬರ್ 2021



"ನೀವು ಪೆದ್ದರಾಗಿದ್ರೆ ಪರವಾಗಿಲ್ಲ, ಮಾಸ್ಕ್ ಮಾತ್ರ ಮರೀಬೇಡಿ."

ಬಿಡಿ ಪ್ರತಿ: ರೂ. 10/-



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 39
ಸಂಚಿಕೆ – 2
ನವೆಂಬರ್ – 2021

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮನಮ್ಮಲ್ಲಿ | ಶಿವಕುಮಾರ್ | 3 |
| ಪಾತಾಳದಲ್ಲಿ ಪಾಪಯ್ಯ | ಪುಂಗನೂರು ಪಾಪಯ್ಯ | 7 |
| ಕ್ಯಾಟ್ರಿಪಿಲರ್‌ನ ಕಾಸ್ಟಿಕ್ ಕಾಂಫರೆನ್ಸು | ಎನ್. ರಾಮನಾಥ್ | 12 |
| ಕಳ್ಳ ಪೊಲೀಸ್ ಆಟ | ಇ.ಆರ್. ರಾಮಚಂದ್ರನ್ | 15 |
| ಆರ್. ಕೆ. ಲಕ್ಷ್ಮಣ್ ಶತಮಾನೋತ್ಸವ | | 20 |
| ವಾಪಸ್ ಕೊಟ್ಟು .... | ಎಚ್. ಗೋಪಾಲಕೃಷ್ಣ | 22 |
| 2 ದಶಕಗಳ ಹಿಂದೆ ಅಪರಂಜಿ | ಭಕ್ತ | 24 |
| ಪುಷ್ಪಕವೂ ಮೂರು ನಕ್ಷತ್ರಗಳೂ | ಜಯಶ್ರೀ ದೇಶಪಾಂಡೆ | 28 |
| ಓದುಗರಿಗೊಂದು ಸವಾಲು | ಪ್ರಕಾಶ್ | 32 |
| ತುಂತುರು | ದನಂಅ | 33 |
| ಕಾಂಟ್ರಾಕ್ಟರ್ ಪಾತಾಳಯ್ಯ | ಸಿ.ಆರ್. ಸತ್ಯ | 35 |
| ಎದ್ದೇಳಜ್ಜಿ, ತಿಪಟೂರು ಬಂತು | ವಿ. ವಿಜಯೇಂದ್ರ ರಾವ್ | 37 |
| ಶೂಟ್, ಶೂಟ್, ಶೂಟಿಂಗ್ | ಸಹನಾ ಪ್ರಸಾದ್ | 38 |
| ಪುಸ್ತಕ ಪರಿಚಯ | | 40 |

ಮುಖಪುಟ : ಇಂಟರ್‌ನೆಟ್ ಕೃಪೆ
ವ್ಯಂಗ್ಯಚಿತ್ರ: ಆರ್. ಕೆ. ಲಕ್ಷ್ಮಣ್, ಎಸ್. ಫಡ್ನಿಸ್,
ಸುನಿಲ್ ಅಗರ್ ವಾಲ್/ಇಯಾನ್ ಬೇಕರ್,

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

●ಪ್ರಕಾಶ್

ಮನೆಗೆ ಕನ್ನ ಹಾಕುತ್ತಿದ್ದ ಪ್ರೇಮಿಗಳ ಸೆರೆ – ಸುದ್ದಿ
ಅಂಥ ಪ್ರೇಮ ಎಂದರೆ ಇದೇ ಇರಬೇಕು !!

* * *

"ರಸ್ತೆ ಮೂಲ ಉದ್ದೇಶ ಬದಲಿಸ ಬೇಡಿ" – ಹೇಳಿಕೆ
ಒಪ್ಪಬೇಕಾದ ಮಾತು ಎಂದು ಅಪರಂಜಿ ತಲೆದೂಗಿದಳಂತೆ !!

* * *

ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಯೋಜನೆ – ಪತ್ರಿಕೆ
37168 ಎಕರೆ ಭೂಸ್ವಾಧೀನ – ಅದೇ ಪತ್ರಿಕೆ
ಎರಡು ಪ್ರಕಟಣೆಗಳು !!

* * *

" ವಸಿಷ್ಠ ಸೊಸೈಟಿ ಹಗರಣ ಸಿಬಿಐಗೆ ವಹಿಸಿ" – ಹೇಳಿಕೆ
ಸಧ್ಯ ದೂರ್ವಾಸರ ಹೆಸರಿಲ್ಲವಲ್ಲ !!

* * *

" ಮನೆಯ ಸುರಕ್ಷತೆಗೆ ಡಿಜಿಟಲ್ ಸ್ಪರ್ಶ"
" ಮನೆ ಕಟ್ಟುವ ಮುನ್ನ ವಾಸ್ತು ತಜ್ಞರ ಸಲಹೆ ಪಡೆಯಿರಿ"
ಒಂದರ ಕೆಳಗೆ ( ಮೇಲೆ ?) ಒಂದು ಶೀರ್ಷಿಕೆಗಳು !!

* * *

ಭವಿಷ್ಯದಲ್ಲಿ ತೊಂದರೆಗೆ ಸಿಲುಕಬೇಡಿ – ಪತ್ರಿಕೆ
ಹೌದು ! ವರ್ತಮಾನದ್ದೇ ಸಾಕಷ್ಟು ಇದೆ !!

* * *

" ಮೋಸ ಹೋಗಬೇಡಿ " – ತಜ್ಞರು
ಅರೆ, ಅದು ಆಮೇಲೆ ತಾನೇ ಗೊತ್ತಾಗೋದು !!

* * *


# ನಮ್ಮ ನಿಮ್ಮಲ್ಲಿ

♦ಶಿವಕುಮಾರ್

ಕಳೆದ ವಾರ ಒಮ್ಮೆ ಗೆಳೆಯ ಶ್ರೀರಾಮ್ ಫೋನ್ ಮಾಡಿ, "ಕಾರಂತರ ಮಕ್ಕಳು ಕಾರಂತರ ಮೇಲೆ ಪುಸ್ತಕ ಬರೆದಿದ್ದಾರಂತೆ. ಬಿ.ಐ.ಸಿ. ಯಲ್ಲಿ ಬಿಡುಗಡೆ. ಬನ್ನಿ ಹೋಗಿಬರೋಣ" ಅಂತ ಆದರದ ಆಹ್ವಾನ ನೀಡಿದರು. ದೂರದ ದೊಮ್ಮಲೂರಿನಲ್ಲಿ ಇರುವ ಬ್ಯಾಂಗಲೂರ್ ಇಂಟರ್‌ನ್ಯಾಷನಲ್ ಸೆಂಟರಿನಲ್ಲಿ ಪುಸ್ತಕ ಬಿಡುಗಡೆ ಸಮಾರಂಭ ಇದ್ದದ್ದು. ಈ ಮಳೇಲಿ ಅಷ್ಟು ದೂರ ಯಾರು ಹೋಗುತ್ತಾರೆ, ಜೂಮ್ ನಲ್ಲಿ ನೋಡಿದರಾಯಿತು ಎಂದುಕೊಂಡಿದ್ದ ನನಗೆ ಶ್ರೀರಾಮ್ ಹೇಳಿದ ಮೇಲೆ, ಮನೆಯಿಂದ ಹೊರಗೆ ಹೋಗುಕ್ಕೆ ಇದೊಂದು ಸುವರ್ಣಾವಕಾಶ ಅಂದುಕೊಂಡು ನಾನು ಅವರಿಗೆ ಒಪ್ಪಿಗೆ ನೀಡಿದೆ. ನನ್ನ ತಮ್ಮ ಪ್ರಕಾಶನೂ ನಮ್ಮೊಡನೆ ಬಂದ. ದಾರಿಯಲ್ಲಿ ಹೋಗುತ್ತಾ ನಾವಿಬ್ಬರೂ ಶ್ರೀರಾಮ್‌ರೊಂದಿಗೆ ಕಾರಂತರ ಕುಟುಂಬದೊಂದಿಗೆ ನಮಗಿದ್ದ ಬಾಲ್ಯದ ನೆನಪುಗಳನ್ನು ಹಂಚಿಕೊಂಡೆವು.

ಐವತ್ತರ ದಶಕದಲ್ಲಿ ನಮ್ಮ ಮನೆಗೆ ನಮ್ಮ ತಂದೆಯವರ ಸಾಹಿತಿ ಮಿತ್ರರನೇಕರು ಬರುತ್ತಿದ್ದರು. ಧಾರವಾಡದಿಂದ ಜಿ.ಬಿ.ಜೋಶಿ, ಬೇಂದ್ರೆ, ಮೈಸೂರಿನಿಂದ ಕಸ್ತೂರಿ, ಬೆಂಗಳೂರಿನಲ್ಲಿ ನಮ್ಮ ಬೀದಿಯಲ್ಲೇ ಇದ್ದ ಶ್ರೀರಂಗ, ಜಿ.ಪಿ.ರಾಜರತ್ನಂ ಇವರೆಲ್ಲ ಬಂದಾಗ ನಡೆಯುತ್ತಿದ್ದ ಮಾತುಕತೆಗಳನ್ನು ಕದ್ದು ಆಲಿಸುವ ಸೌಭಾಗ್ಯ ನಮ್ಮದಾಗಿತ್ತು. ಹೀಗೆ ಬರುತ್ತಿದ್ದ ಮಿತ್ರರಲ್ಲಿ ಪುತ್ತೂರಿನಿಂದ ಬರುತ್ತಿದ್ದ ಕಾರಂತರೂ ಒಬ್ಬರು. ಕಾರಂತರು ಬಂದರೆಂದರೆ ನಮಗೆ ಎಲ್ಲಿಲ್ಲದ ಸಂಭ್ರಮ. ಏಕೆಂದರೆ ಅನೇಕ ಬಾರಿ ಅವರು ತಮ್ಮೊಂದಿಗೆ ತಮ್ಮ ಪತ್ನಿ ಮಕ್ಕಳನ್ನೂ ಸಹಾ ಕರೆದು ತರುತ್ತಿದ್ದರು. ಆ ಸಮಯದಲ್ಲಿ ಉಲ್ಲಾಸ, ನನ್ನ ತಮ್ಮನೊಂದಿಗೆ ಟೆನ್ನಿಸ್ ಬಾಲ್ ಕ್ರಿಕೆಟ್ ಆಡುತ್ತಿದುದು ಇಂದಿಗೂ ನೆನಪಿದೆ. ಇದಕ್ಕೂ ಹಿಂದಿನ ಭೇಟಿಯೊಂದರಲ್ಲಿ ಕಾರಂತ ದಂಪತಿಗಳು ತಮ್ಮ ಮಗಳು ಮಾಲವೀಕ ಮತ್ತು ಉಲ್ಲಾಸರೊಂದಿಗೆ ಬಂದಿದ್ದರು. ಉಲ್ಲಾಸ್ ಪುಟ್ಟ ಮಗು. ನಮ್ಮಕ್ಕ ಲೀಲ, ಮಾಲವೀಕಳಿಗೆ ಜೊತೆ. ಒಮ್ಮೆ ಮಗು ಅಳಲು ಪ್ರಾರಂಭಿಸಿದಾಗ, ಮಾಲವೀಕ ಮಗುವನ್ನೆತ್ತಿಕೊಂದು ಹೊರಗಿನ ತೋಟಕ್ಕೆ ಹೋಗಿ ಸಮಾಧಾನ ಮಾಡುತ್ತಾ, " ವಿಮಾನ ನೋಡು ಉಲ್ಲಾಸ, ಎಂತ ಚಂದ " ಅಂತ ಹೇಳಿದಳಂತೆ. ಆ ದಿನಗಳಲ್ಲಿ ನಮಗ್ಯಾರಿಗೂ ದಕ್ಷಿಣ ಕನ್ನಡದ ಭಾಷೆಯ ಗಂಧವೂ ಇರಲಿಲ್ಲ. ಹಾಗಾಗಿ ಇದನ್ನು ನಮ್ಮಕ್ಕ ನಮಗೆಲ್ಲಾ ಆಮೇಲೆ ಹೇಳಿ ನಕ್ಕಿದ್ದೇ ನಕ್ಕಿದ್ದು.

ನಾವು ಬಿ.ಐ.ಸಿ. ಸೇರಿದಾಗ ಮಳೆ ನಿಂತಿತ್ತು. ಭವ್ಯವಾದ ಭವನ. ಬಾಲ್ಯದ ಗೆಳೆಯ ಗೆಳತಿಯರ ಬಹುದಿನಗಳ ನಂತರದ ಭೇಟಿ ಬಹು ಅಪ್ಯಾಯಮಾನವಾಗಿತ್ತು. " ಗ್ರೋಯಿಂಗ್ ಅಪ್ ಕಾರಂತ್" ಪುಸ್ತಕದ ಪ್ರತಿಗಳು ಮಾರಾಟಕ್ಕಿದ್ದವು. ಮಾಲವೀಕ, ಉಲ್ಲಾಸ್ ಮತ್ತು ಕ್ಷಮಾ ಇವರೆಲ್ಲರೂ ಸೇರಿ ಬರೆದಿದ್ದ ಪುಸ್ತಕ ಇದು. ಎಲ್ಲರ ಸಹಿ ಇದ್ದ ಪ್ರತಿಯೊಂದನ್ನು ನಾನು ಪಡೆದೆ. ಸಮಾರಂಭ ಆರುಘಂಟೆಗೆ ಸರಿಯಾಗಿ ಶುರುವಾಯಿತು. ಸುಗತ ಶ್ರೀನಿವಾಸ ರಾಜು ಮತ್ತು ವಿವೇಕ್ ಶಾನಭಾಗ್ ಬಹು




ಚೆನ್ನಾಗಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಕಾರಂತರದ್ದು ಮೇರು ಪರ್ವತದಂತಹ ವ್ಯಕ್ತಿತ್ವ. ಅವರ ಸಾಧನೆಗಳು ಹಲವಾರು ಕ್ಷೇತ್ರಗಳಲ್ಲಿ ಹರಡಿದ್ದವು. ಇವೆಲ್ಲ ಅಂಶಗಳನ್ನು ಭಾಷಣಕಾರರು ಬಹು ಸ್ವಾರಸ್ಯವಾಗಿ ನಮ್ಮ ಮುಂದಿಟ್ಟರು. ಭಾಷಣಗಳ ನಂತರ ವೇದಿಕೆಯ ಮೇಲೆ ಮಾಲವೀಕ, ಉಲ್ಲಾಸ್ ಮತ್ತು ಕ್ಷಮಾರವರೊಂದಿಗೆ ಶ್ರೀ ಚಿರಂಜೀವಿ ಸಿಂಗ್ ಸಹಾ ಸೇರಿಕೊಂಡು ಪುಸ್ತಕದ ಹುಟ್ಟಿನ ಬಗ್ಗೆ ಮಾತುಕತೆ ನಡೆಸಿದರು. ಸಿಂಗ್ ರವರ ಸ್ನೇಹಪೂರ್ವಕ ಒತ್ತಾಯದಿಂದಲೇ ಈ ಪುಸ್ತಕ ಹೊರಬಂದದ್ದು ಎಂದು ಲೇಖಕರು ಕೃತಜ್ಞತೆಯಿಂದ ನೆನಪಿಸಿಕೊಂಡರು.

ಮನೆಗೆ ಹಿಂತಿರುಗಿ ಪುಸ್ತಕವನ್ನು ಓದಲು ಕೈಗೆತ್ತಿಕೊಂಡೆ. ಬಹು ಸೊಗಸಾಗಿ ಮೂಡಿಬಂದಿರುವ ಪುಸ್ತಕವಿದು. ಭಾಷಾ ಪ್ರೌಢಿಮೆ, ಆಪ್ತ ಶೈಲಿ ಇವೆಲ್ಲ ಸೇರಿ ಒಂದು ಚೇತೋಹಾರಿ ಅನುಭವ ದೊರಕಿತು. ಮಾಲವೀಕ ಅವರ ನೆನಪುಗಳು ಬಹು ಮನೋಹರವಾಗಿ ಚಿತ್ರಿತವಾಗಿವೆ. ಪುಟ್ಟ ಹುಡುಗಿ ಮಾಲವೀಕ ಒಮ್ಮೆ ಕಾರಂತರೊಡನೆ ಕೆ.ವಿ. ಅಯ್ಯರ್ ಅವರ ವ್ಯಾಯಾಮಶಾಲೆಗೆ ಹೋಗಿದ್ದಾಗ, ಅಯ್ಯರ್ ಅವರು ಮಗುವನ್ನು ಹಿಡಿದೆತ್ತಿ, "ಏಳು ಮಲ್ಲಿಗೆ ತೂಕದ ನಮ್ಮ ರಾಜಕುಮಾರಿ !" ಅಂತ ಉದ್ಗರಿಸಿದರಂತೆ. ಇವರ ಬರಹದಲ್ಲಿ ದಕ್ಷಿಣ ಕನ್ನಡದ ಪರಿಸರ, ಕಣ್ಣಿಗೆ ಕಟ್ಟುವಂತೆ ಇದೆ. ಉಲ್ಲಾಸ್ ಕಾರಂತರು ವನ್ಯಜೀವಿಗಳ ಸಂರಕ್ಷಣೆಯನ್ನು ತಮ್ಮ ವೃತ್ತಿಯನ್ನಾಗಿ ಆರಿಸಿಕೊಂಡಾಗ, ಅದಕ್ಕೆ ತಮ್ಮ ತಂದೆ ನೀಡಿದ ಪ್ರೋತ್ಸಾಹವನ್ನು ಇಲ್ಲಿ ಸ್ಮರಿಸಿಕೊಳ್ಳುತ್ತಾರೆ.

ಈ ಪುಸ್ತಕವನ್ನು ಓದುತ್ತಿದ್ದಾಗ ಕಾರಂತರ ಬಗ್ಗೆ ನಮಗೆ ತಿಳಿದಿರುವ ಚಾರಿತ್ರಿಕ ಅಂಶಗಳ ಜೊತೆಗೆ ಕಾಲಯಾನ ಯಂತ್ರವೊಂದರಲ್ಲಿ ಕುಳಿತು ಐವತ್ತರ ದಶಕದ ಬಾಲವನಕ್ಕೆ ತೆರಳಿ ಅಲ್ಲಿನ ವಿದ್ಯಮಾನಗಳನ್ನು ಪ್ರತ್ಯಕ್ಷವಾಗಿ ನೋಡಿದ ಅನುಭವವಾಯಿತು. ಶಿವರಾಮ ಕಾರಂತರನ್ನು ಯುಗ ಪುರುಷರೆಂದೇ ಹೇಳಬಹುದು. ಅವರ ಅಸಾಧಾರಣ ಪ್ರತಿಭೆ ಯಕ್ಷಗಾನ, ಸಾಹಿತ್ಯ, ವಿಜ್ಞಾನ, ಇವೇ ಮುಂತಾಗಿ ಹಲವಾರು ಕ್ಷೇತ್ರಗಳಲ್ಲಿ ಹೊಸ ಹೊಳಹನ್ನು ನೀಡಿದೆ. ಅವರು ಬರೆದಿರುವ ಬೆಟ್ಟದ ಜೀವ, ಔದಾರ್ಯದ ಉರುಳಲ್ಲಿ, ಕುಡಿಯರ ಕೂಸು ಇವೆಲ್ಲಾ ಅಸಾಧಾರಣ ಕಾದಂಬರಿಗಳು. ನಮ್ಮ ಜೀವನದ ಮೌಲ್ಯಗಳನ್ನು ಪ್ರಶ್ನಿಸುವ ಮೂಕಜ್ಜಿಯ ಕನಸುಗಳು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದಿ ರುವುದು ಅದರ ಅಪ್ರತಿಮ ಹಿರಿಮೆಗೆ ಸಾಕ್ಷಿ. ಇಂತಹ ಮಹಾನುಭಾವರ ಜೀವನವನ್ನು ಅತ್ಯಂತ ಹತ್ತಿರದಿಂದ ನೋಡಿ ಅನುಭವಿಸಿದ ಮಾಲವೀಕ ಕಪೂರ್, ಉಲ್ಲಾಸ್ ಕಾರಂತ್ ಮತ್ತು ಕ್ಷಮಾ

ರಾವ್ ಇವರುಗಳು ನಮಗೆ ಒಂದು ಅಪೂರ್ವವಾದ ಪುಸ್ತಕವನ್ನು ನೀಡಿದ್ದಾರೆ. ಪುಸ್ತಕದ ಸ್ವಾರಸ್ಯವನ್ನು ಓದುಗರೊಂದಿಗೆ ಹಂಚಿಕೊಳ್ಳುವ ಸಲುವಾಗಿ ಕ್ಷಮಾರವರ ಬರಹದ ಒಂದು ಭಾಗವನ್ನು ಕನ್ನಡಿಸಿ, ಕೆಳಗೆ ನೀಡಿರುವೆ.

" ನಮ್ಮ ಬಾಲವನದ ಕಾಡುಗಳು ವೈವಿಧ್ಯಮಯ ಚಿಟ್ಟೆಗಳ ತಾಣ. ಹಲವೊಮ್ಮೆ ನಾನು ಮಳೆಹುಳಗಳನ್ನೂ ಗಮನಿಸಿದ್ದೆ. ಕೆಲವಕ್ಕೆ ಕೆಂಪು ಬಾಲವಿದ್ದರೆ ಇನ್ನು ಹಲವಕ್ಕೆ ಕಡು ಹಳದಿ ಬಾಲ. ಇನ್ನೊಂದು ಅತಿ ವಿರಳವಾದ ಮಳೆಹುಳದ ಜಾತಿಯೆಂದರೆ ತೀರ ತೆಳು ಹಳದಿ ಬಾಲ ಮತ್ತು ಹಸಿರು ದೇಹವನ್ನು ಹೊಂದಿರುವಂಥವು. ಇವನ್ನು ನಾನು 'ದುನಿಯಾ" ಎಂದು ನಾಮಕರಣ ಮಾಡಿದ್ದೆ. ತುಂಬಾ ಅದ್ಭುತವಾದ ಹಕ್ಕಿಗಳೂ ಬಾಲವನದಲ್ಲಿ ಕಾಣಸಿಗುತ್ತಿದ್ದವು. ತೀವ್ರವೇಗದಿಂದ ಹಾರಾಡುತ್ತಿದ್ದ ಪಚ್ಚೆ ಪಾರಿವಾಳಗಳು ನಮಗೆ ಅತೀವ ಖುಷಿ ಕೊಡುತ್ತಿದ್ದವು. ಚಿನ್ನದ ಬಣ್ಣದ ಸೀತೆ ಹಕ್ಕಿ, ರಾಮಗಿಳಿ, ಒಂದೂವರೆ ಅಡಿ ಉದ್ದದ ಎರಡು ಪುಕ್ಕಗಳಿರುವ ಬಾಲದಂಡೆ ಹಕ್ಕಿ ( ಪ್ಯಾರಡೈಸ್ ಫ್ಲೈ ಕ್ಯಾಥರ್) , ಇವುಗಳನ್ನೆಲ್ಲಾ ನೋಡುವುದೇ ಕಣ್ಣಿಗೆಹಬ್ಬ. ನನ್ನ ಅಣ್ಣ ಉಲ್ಲಾಸ ಆ ಚಿಕ್ಕ ವಯಸ್ಸಿನಲ್ಲೂ ಬಹು ಶ್ರದ್ಧೆಯಿಂದ ಪಕ್ಷಿಗಳನ್ನು ಗಮನಿಸುವ ಹವ್ಯಾಸವನ್ನು ಬೆಳೆಸಿಕೊಂಡಿದ್ದ. ನಮ್ಮ ಮನೆಯಲ್ಲಿ ಸಾಕು ನಾಯಿಗಳು, ಬೆಕ್ಕುಗಳು, ಪಾರಿವಾಳಗಳು ಮತ್ತು ಇವುಗಳ ಜೊತೆಗೆ ಹಲವೊಮ್ಮೆ ನವಿಲುಗಳು ಮತ್ತು ಮೊಲಗಳನ್ನೂ ಸಾಕಿಕೊಂಡಿದ್ದೆವು.

ತಾತ (ಮಕ್ಕಳು ತಮ್ಮ ತಂದೆಯವರನ್ನು ತಾತ ಎಂದು ಕರೆಯುತ್ತಿದ್ದರಂತೆ) ಮತ್ತು ಅಮ್ಮ ಹಲವಾರು ಜರ್ಮನ್ ಷೆಪರ್ಡ್ ನಾಯಿಗಳನ್ನು ಸಾಕಿದ್ದರು. ಗ್ರೀಕ್ ಪುರಾಣಗಳ ಹೆಸರುಗಳನ್ನು ಈ ನಾಯಿಗಳಿಗೆ ಇಟ್ಟಿದ್ದರು. ಹೆಲೆನ್, ಹೆಕ್ಟರ್, ಬ್ರೂಸ್, ಬಾಲ್ಡರ್ ಇವು ನೆನಪಿನಲ್ಲಿವೆ. ಹಲವೊಮ್ಮೆ ರಾತ್ರಿವೇಳೆಯಲ್ಲಿ ಚಿರತೆಗಳು ಸುಳಿದಾಡುತ್ತಿದುದನ್ನು ನಮ್ಮ ದೊಡ್ಡಣ್ಣ ಹರ್ಷ ನೋಡಿದ್ದನಂತೆ.

ಆ ದಿನಗಳಲ್ಲಿ ಪುತ್ತೂರಿನಲ್ಲಿ ವಿದ್ಯುತ್ ಶಕ್ತಿ ಇರಲಿಲ್ಲ. ಹಾಗಾಗಿ ತಾತ ಒಂದು ಡೀಸೆಲ್ ಜನರೇಟರನ್ನು ಮನೆಯಲ್ಲಿ ಪ್ರತಿಷ್ಠಾಪನೆ ಮಾಡಿದ್ದರು. ಸಂಜೆ ಆರೂವರೆಯಿಂದ ಒಂಭತ್ತರವರೆಗೂ ಇದು ಓಡುತ್ತಿತ್ತು. ಆ ಸಮಯದಲ್ಲಿ ಇಡೀ ಮನೆ, ಮತ್ತು ರಸ್ತೆಯವರೆಗಿನ ಕಾಲುದಾರಿ ಇವೆಲ್ಲಾ ದೀಪಗಳಿಂದ ಝಗಝಗಿಸುತ್ತಿತ್ತು. ಜನರೇಟರಿನ ಆರ್ಭಟದಿಂದ ಯಾವ ಚಿರತೆಯೂ ಹತ್ತಿರ ಸುಳಿಯುತ್ತಿರಲಿಲ್ಲ. ಇದನ್ನೆಲ್ಲಾ ನೆನೆಸಿಕೊಂಡರೆ ನಮ್ಮ ಅಮ್ಮ ಮತ್ತು ತಾತ ಎಷ್ಟು ಕೆಚ್ಚೆದೆಯವರಪ್ಪಾ ಅನ್ನಿಸುತ್ತದೆ.

ದೆಯಕ್ಕು ರೈ ಎಂಬ ಒಬ್ಬ ಮುದುಕಿ ಒಂದು ದಾರಿಬದಿಯ ತಿಂಡಿ ಅಂಗಡಿಯನ್ನು ನಡೆಸುತ್ತಿದ್ದಳು. ಅವಳನ್ನು ನಾವು ಹೊಟೆಲ್ ಅಜ್ಜಿಯೆಂದೇ ಕರೆಯುತ್ತಿದೆವು. ಆಕೆ ಆಗಾಗ್ಗೆ ಬಾಲವನಕ್ಕೆ ಬರುತ್ತಿದ್ದಳು. ಹಸುಗಳ ಹಾಲು ಕರೆಯುವುದು, ಗೋಡಂಬಿ ಹಣ್ಣಾದಾಗ ಅವನ್ನು ಕೀಳುವುದು ಇವೆಲ್ಲಾ ಆಕೆಯ ಕೆಲಸ.

ಹೋಟೆಲ್ ಅಜ್ಜಿ, ಉಲ್ಲಾಸನಿಗೆ ಮತ್ತು ನನಗೆ ತುಳು ಜಾನಪದ ಕಥೆಗಳನ್ನು ಅದ್ಭುತವಾಗಿ ಹೇಳುತ್ತಿದ್ದಳು. ಅವಳ ಬಳಿ ದೆವ್ವದ ಕಥೆಗಳ ಒಂದು ರಾಶಿಯೇ ಇತ್ತು. ಆಕೆ ಅದನ್ನು ಹೇಳುವಾಗ ತಕ್ಕ ಪರಿಸರ ಇರಲೆಂದು ನಾವು ದೀಪಗಳನ್ನು

ಆರಸಿಬಿಡುತ್ತಿದ್ದೆವು. ಅಕಸ್ಮಾತ್ತಾಗಿ ದೆವ್ವ ಕಂಡರೆ ಅದನ್ನು ಗುರುತಿಸಲು ಸಾಧ್ಯವಾಗಲೆಂದು ಅವಳು ನಮಗೆ ದೆವ್ವಗಳ ಚಹರೆಯ ಬಗ್ಗೆ  ತಯಾರಿ ನೀಡಿದ್ದಳು. ಒಂದು ದೆವ್ವದ ಜಾತಿಗೆ ಪಾದಗಳು ಹಿಂದು ಮುಂದಾಗಿದ್ದರೆ, ಇನ್ನೊಂದು ಜಾತಿ ಬಿಳಿಬಣ್ಣದ ಬಟ್ಟೆಯನ್ನು ಹೊದ್ದಿರುವಂತೆ  ಕಾಣುತ್ತದಂತೆ. ಮಗದೊಂದು ಜಾತಿ ನೆಲದಿಂದ ಮೂರಡಿ ಎತ್ತರದಲ್ಲಿ ತೇಲಾಡುತ್ತಿರುವುದಂತೆ.  ಬಾಲವನದ ಸುತ್ತ ಗುಡ್ಡಗಳು ಆವರಿಸಿದ್ದವು. ಅಮಾವಸ್ಯೆಯ ರಾತ್ರಿ  ದೊಂದಿ ಭೂತಗಳು ( ಘಟ್ಟದ ಮೇಲಿನವರಿಗೆ ಕೊಳ್ಳಿದೆವ್ವ) ಗುಡ್ಡದಿಂದ ಗುಡ್ಡಕ್ಕೆ ಹಾರಾಡುವುದನ್ನು ಅಜ್ಜಿ ಕಣ್ಣಾರೆ ನೋಡಿದ್ದಳಂತೆ!"

ಅಗತ್ಯವಾಗಿ ಎಲ್ಲರೂ ಕೊಂಡು ಓದಬೇಕಾದಂತಹ ಪುಸ್ತಕ " ಗ್ರೋಯಿಂಗ್ ಅಪ್ ಕಾರಂತ್". ಲೇಖಕ ವೃಂದಕ್ಕೆ ಅಪರಂಜಿಯ ಅಭಿನಂದನೆಗಳು.

**ಪ್ರಕಾಶಕರು: ವೆಸ್ಟ್‌ಲ್ಯಾಂಡ್ ಪಬ್ಲಿಕೇಶನ್ಸ್. ಪುಟಗಳು : 210. ಈ ಬುಕ್ ಲಭ್ಯ.**

---



**ಲಕ್ಷ್ಮಣ್ ಕೊರವಂಜಿ**

**ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.**

**ಅವುಗಳಲ್ಲಿ ಇದೂ ಒಂದು – ನಿಮಗಾಗಿ.**



**ಹೋಗ್ಲಿ ಬಿಡು ಅಪ್ಪಾ, ಮೇಷ್ಟ್ರು ಕೇಳಿದರೆ, 'ಅಪ್ಪ ಮಾಡಿಕೊಡಲಿಲ್ಲ ಲೆಕ್ಕ. ಅಮ್ಮ ಮಾಡಿದಳು.' ಅಂತ ಹೇಳ್ಬಿಡ್ತೇನೆ.**

ಕೊರವಂಜಿಯಿಂದ (ಡಿಸೆಂಬರ್ 1947)

# ಪಾತಾಳದಲ್ಲಿ ಪಾಪಯ್ಯ

## (3. ಕುಬೇರಾ ಪ್ರಿಂಟಿಂಗ್ ಪ್ರೆಸ್)

● ಪುಂಗನೂರು ಪಾಪಯ್ಯ.

ಸಂಜೆ ಸುಮಾರು ಏಳರ ಸಮಯ. ದೀಪಗಳಿದ್ದ ಪಕ್ಷದಲ್ಲಿ ದೀಪ ಹೊತ್ತಿಸುವ ವೇಳೆ. ನಿಶಾಚರರ ಸಂಚಾರವಿನ್ನೂ ಪ್ರಾರಂಭಿಸಿರಲಿಲ್ಲ. ದಾರಿ ತಪ್ಪೀತೆಂಬ ಗಾಬರಿಯಿಂದ ನಾನು ಆದಷ್ಟು ಬೇಗ ನನ್ನ ಹೋಟಲನ್ನು ಸೇರಿಕೊಳ್ಳುವ ಯತ್ನದಲ್ಲಿ ಸರಸರನೆ ನಡೆಯುತ್ತಿದ್ದೆ. ಅಲ್ಲೊಂದು ಇಲ್ಲೊಂದು ಅರ್ಧಂಬರ್ಧ ಕದ ತೆರೆದ ಎಲೆಯಡಿಕೆಯಂಗಡಿಗಳಿಂದ ಹಣತೆಯ ಬೆಳಕುಗಳು ಮಿಣುಗುತ್ತಿದ್ದವು. ಗಂಟೆ ಎಷ್ಟೆಂದು ಸರಿಯಾಗಿ ತಿಳಿಯುವ ಉದ್ದೇಶದಿಂದ ಒಂದು ಅಂಗಡಿಯ ಹತ್ತಿರ ಹೋಗಿ ದೀಪದ ದಿಕ್ಕಿಗೆ ಕೈಗಡಿಯಾರವನ್ನು ತಿರುಗಿಸಿ ಹಿಡಿದೆ.

ಎಲೆಯಡಿಕೆ ಅಗಿಯುತ್ತ ಅಲ್ಲೇ ನಿಂತಿದ್ದ ಒಬ್ಬ ಆಸಾಮಿ, ಬಾಯಲ್ಲಿದ್ದ ತಂಬುಲವನ್ನು ಚರಂಡಿಯೊಳಕ್ಕೆ ಉಗುಳಿ ನನ್ನ ಕಡೆ ತಿರುಗಿದ.

"ಎಷ್ಟಾಯ್ತು ಸಾರ್ ಟೈಮು?"

"ಆರೂ ಐವತ್ತೈದು"

"ಥ್ಯಾಂಕ್ಸ್. ಒಂದುಪಕಾರ ಮಾಡ್ತೀರಾ?"

"ಏನು? ಹೇಳಿ."

"ಒಂದು ನೂರು ರೂಪಾಯಿ ನೋಟಿಗೆ ಚಿಲ್ರೆ ಇರುತ್ತೆಯೇ ಅಂತ..."

ತಡೀರಿ. ಇದ್ರೆ ನೋಡೋಣಾಂದೆ.

ಕೋಟಿನ ತೋಳಿನೊಳಕ್ಕೆ ಕೈಬಿಟ್ಟು ಕಳ್ಳ ಜೇಬಿನಿಂದ ನನ್ನ ಪರ್ಸನ್ನು ಈಚೆಗೆಳೆದೆ.

"ಕ್ಷಮಿಸಿ– ಇಪ್ಪತ್ತು ರೂಪಾಯಿ ಕಮ್ಮಿ ಇದೆ."

"ಪರವಾಯಿಲ್ಲ ಕೊಡಿ. ತಮ್ಮ ವಿಳಾಸ ಕೊಟ್ಟರೆ, ನಾಳೆ ಬಂದು ಬಾಕಿ ತೆಗೆದುಕೋತೇನೆ. ಈಗ ಬಹಳ ಅರ್ಜೆಂಟಾಗಿ ಚಿಲ್ಲರೆ ಬೇಕಾಗಿದೆ...."

ಪಾತಾಳಕ್ಕೆ ನನಗಿಂತ ಹೊಸಬನಾಗಿ ಕಂಡ ಆ ಮನುಷ್ಯನ ಮೇಲೆ ಸ್ವಲ್ಪ ಕನಿಕರವಾಯ್ತು. ಚಿಲ್ಲರೆ ಅವನಿಗೆ ಬಹಳ ತುರ್ತಾಗಿ ಬೇಕಾಗಿರಬಹುದೆಂದು ಎಂಬತ್ತು ರೂಪಾಯನ್ನವನ ಕೈಲಿಟ್ಟು ಅವನ ನೂರು ರೂಪಾಯಿ ನೋಟನ್ನು ಮಡಿಸಿ ಭದ್ರಪಡಿಸಿ ನನ್ನ ಅಡ್ರೆಸ್ಸನ್ನವನಿಗೆ ಹೇಳಿದೆ. ಹಾಗೇ ಅವನಿಗೆ ಒಂದು ಉಪಕಾರವನ್ನು ಮಾಡೋಣವೆಂದುಕೊಂಡು ಅವನನ್ನು ಎಚ್ಚರಿಸಿದೆ.

"ನೋಡಿ––ನೀವಿಲ್ಲಿಗೆ ಹೊಸಬರ ಹಾಗೆ ಕಾಣುತ್ತೀರಿ. ದುಡ್ಡಿನ ವಿಷಯದಲ್ಲಿ

ಹೀಗೆ ಹಿಂದು ಮುಂದು ನೋಡದೆ ಒಬ್ಬರನ್ನು ನಂಬಿಬಿಡಬಾರದು, ಈ ಜಾಗದಲ್ಲಿ. ನಾನಾಗೋಹೊತ್ತಿಗೆ ಪರವಾಗಿಲ್ಲ....." ಅಂದೆ.

ಅವನು ನನ್ನ ಬೆನ್ನು ತಟ್ಟಿ "ನೋಡಿ... ನಾನೂ ಅದೇ ಹೇಳಬೇಕಂತಿದ್ದೆ ನಿಮಗೆ. ನಾನಾಗೋ ಹೊತ್ತಿಗೆ ಪರವಾಗಿಲ್ಲ. ನನ್ನ ಗುರುತು ಸಿಗಲಿಲ್ಲವೆ?" ಅಂದ.

ಹಣತೆಯ ಬೆಳಕಿನಲ್ಲಿ ಬಗ್ಗಿ ನೋಡಿದೆ. ನಾನು ಪಾತಾಳಕ್ಕೆ ಮೊಟ್ಟ ಮೊದಲು ಪ್ರವೇಶಿಸಿದಾಗ ನನ್ನ ಮಾರ್ಗದರ್ಶಿಯಾದ ಮನುಷ್ಯ!

"ಅರೇರೇ ನೀವೇ? ಗುರ್ತೇಸಿಗಲಿಲ್ಲ!" ಅಂದೆ.

"ಅಂತೂ ಇನ್ನು ಮುಂದೆ ಎಚ್ಚರಿಕೆಯಿಂದ ಇರಿ" ಅಂದ, ಮತ್ತೆ ನನ್ನ ಬೆನ್ನು ತಟ್ಟಿ.

"ಅದು ಸರೀ.... ರೂಪಾಯಿ ನನ್ನಿಂದ ತಾನೇ ನಿಮಗೆ ಬಾಕಿ. ನನಗೇನು ಎಚ್ಚರಿಕೆ ಕೊಡುತ್ತಿದ್ದೀರಿ?" ಅಂದೆ.

"ಹ ಹ್ಹ ಹ್ಹ! ಈ ಬೆಳಕಿನಲ್ಲಿ ನಿಮ್ಮ ನೂರು ರೂಪಾಯಿ ನೋಟನ್ನು ಸ್ವಲ್ಪ ಪರೀಕ್ಷೆ ಮಾಡಿ ನೋಡಿ, ಗೊತ್ತಾಗುತ್ತೆ" ಅಂದ.

ನೋಟು ಖೋಟಾ ಅನ್ನುವುದು ಸ್ಪಷ್ಟವಾಗಿ ತಿಳಿದು ಬಂತು. ನನ್ನ ಮಾರ್ಗದರ್ಶಿ ಆ ಅಂಗಡಿಯ ಮಾಲೀಕನೊಂದಿಗೆ ಸೇರಿ ನಗಲಾರಂಭಿಸಿದ, ನನ್ನ ಮೂತಿಯನ್ನು ನೋಡಿ. ಕೆಲವು ಕ್ಷಣಗಳು ಕಳೆದಮೇಲೆ ಅಂಗಡಿಯವನಿಗೆ ನನ್ನ ಪರಿಚಯ ಮಾಡಿಕೊಟ್ಟ.

"ಇವರೇಕಣಯ್ಯ ಪಾಪಯ್ಯ ಅಂಬೋರು, ಈಗತಾನೇ ಹೇಳಿದೆನಲ್ಲ.. ಈತ ನನ್ನ ಸ್ನೇಹಿತ ಜಾನ್ ಸ್ಮಿತ್."

"ನಮಸ್ಕಾರ. ಕ್ರಿಶ್ಚಿಯನ್?"

"ಕ್ರಿಶ್ಚಿಯನ್. ಈತನ ಅಡ್ಡ ಹೆಸರು ಕುಬೇರ ಅಂತ. ಎಲ್ಲಿ, ಸ್ವಲ್ಪ ಕಚ್ಚೆ ಕಟ್ಟಿ ಅಂಗಡಿಯೊಳಕ್ಕೆ ನೆಗೀರಿ. ಇವರ ಖೋಟಾ ನೋಟಿನ ತಯಾರಿಕೆಯ ಬಿಸಿನಸ್ಸಿನ ಪರಿಚಯ ಮಾಡಿಕೊಂಡು ಹೋಗುವಿರಂತೆ. ಹೊತ್ತಾದರೆ ಪರವಾಗಿಲ್ಲ. ನಾನು ದಾರಿ ತೋರಿಸ್ತೇನೆ ನಿಮಗೆ."

ಅಂಗಡಿಯ ಪೀಠದ ಹಿಂದೆ ತೂಗುತ್ತಿದ್ದ ಹಗ್ಗದ ಸಹಾಯದಿಂದ ನೆಗೆದು ಒಳಕ್ಕೆ ಕುಪ್ಪಳಿಸಿದೆ. ನನ್ನ ಸ್ನೇಹಿತನೂ ಹಿಂಬಾಲಿಸಿದ. ಕೂಡಲೆ ಜಾನ್‌ಸ್ಮಿತ್ ಅಂಗಡಿಯ ಬಾಗಿಲು ಮುಚ್ಚಿ ಅಗುಳಿ ಹಾಕಿ ಗೋಡೆಯಮೇಲೆ ಬೀಡಿಗಳ ಸಾಲಿನ ಒಂದು ಷೆಲ್ಫನ್ನು ಅನಾಮತ್ತಾಗಿ ತೆಗೆದು ಕೆಳಗಿಟ್ಟ.. ಪತ್ತೇದಾರಿ ಕಥೆಗಳಲ್ಲಿ ನಾವೆಲ್ಲ ಓದಿರುವಂತೆ ಆ ಷೆಲ್ಫ್ ಇದ್ದ ಜಾಗದಲ್ಲಿ ಒಂದು ಬಾಗಿಲು! ಮೂರು ಸಲ ಟಿಕ್ ಟಿಕ್ ಟಿಕ್ ಎಂದು ತಟ್ಟಿದ ಜಾನ್‌ಸ್ಮಿತ್ ಎರಡು ನಿಮಿಷ ಕಳೆದು ಇನ್ನೊಂದು ಸಲ ತಟ್ಟಿದಮೇಲೆ ಬಾಗಿಲು ತೆಗೆಯಿತು. ದೇವರ ಮೇಲೆ ಭಾರ ಹಾಕಿ ತಲೆ ಬಗ್ಗಿಸಿಕೊಂಡು ಅವರಿಬ್ಬರನ್ನು ಹಿಂಬಾಲಿಸಿ ನುಸಿದೆ ಒಳಕ್ಕೆ.

ಚಿಕ್ಕ ವಿಸ್ತೀರ್ಣದ ಮಂಕು ಬೆಳಕಿನ ಒಂದು ತಗ್ಗಾದ ಕೋಣೆ ಅದು. ಅದರ ನಟ್ಟನಡುವೆ ಒಂದು ಮಂಚದಮೇಲೆ ಮೂಗಿನವರೆಗೆ ಕಂಬಳಿ ಹೊದ್ದು ಒಬ್ಬ

ನಡುವಯಸ್ಸಿನಾಕೆ ನರಳುತ್ತಾ ಮಲಗಿದ್ದಳು. ಬಾಗಿಲು ತೆಗೆದವನು ಎಳೆ ವಯಸ್ಸಿನ ಚೂಟಿಯಾದ ಒಬ್ಬ ಹುಡುಗ. ಒಳಗೆ ಬಂದಕೂಡಲೆ ಆ ಹುಡುಗನ ಬೋಳು ತಲೆಯಮೇಲೆ ಫಟ್ ಎಂದು ಆಶೀರ್ವಾದ ಮಾಡಿದ ಜಾನ್‌ಸ್ಮಿತ್.

"ಅಲ್ವೋ! ಮುತ್ತಾಳ ಬಡ್ಡಿಗಳ್ರಾ. ಮೂರು ಸಲ ತಟ್ಟಿದರೆ, ತಟ್ಟಿದ ಕೂಡಲೆ ಬಾಗಿಲು ತೆಗೀಬೇಕಂತ ಎಷ್ಟು ಸಲ ಹೊಡುಕೊಬೇಕ್ರೊ ನಿಮ್ಮ ಮಂಡೇಗೆ ಹತ್ತೋಕೆ? ನಾಲ್ಕು ಸಲ ತಟ್ಟಿದಾಗ ಮಾತ್ರ, ಬೈರಾಗಿ ಬಂದಿದಾನೆ, ವೇಷ ಬದಲಾಯಿಸಿ ಅಂತ ಅರ್ಥ, ಮಂದಮತಿಗಳ್ರಾ!" ಎಂದು ಮಂಚದ ಮೇಲಿದ್ದ ಮನುಷ್ಯನನ್ನು ಕಿವಿಹಿಡಿದೆಬ್ಬಿಸಿ ಮಂಗಳಾರತಿ ಮಾಡಿದ.

ನಾನು ಶಿಫಾರಸಿಗಾಗಿ ನಡುವೆ ಬಾಯಿ ಹಾಕಿ "ಇರಲಿ ಈಗೇನಂತೆ. ಅಷ್ಟು ಬೇಗ ಬೇಗ ಟೋಪನ್‌ಗೀಪನ್ ತಗುಲಿಸಿಕೊಂಡು ನಿಮ್ಮ ಶಿಷ್ಯ ತಯಾರಾದದ್ದನ್ನು ಮೆಚ್ಚಬೇಡವೆ?" ಅಂದೆ.

"ಸ.. ರಿ. ಇವನಿಗಾದರೆ ಮೂರು ನಿಮಿಷ ಹಿಡೀತು. ಇವರಣ್ಣ ಒಬ್ಬ ಇದಾನೆ, ಚಿಕಾಗೋಗೆ ಹೋಗಿದ್ದಾನೆ ತಯಾರೀಗೆ. ಒಂದುವರೆ ನಿಮಿಷದಲ್ಲಿ ಮಲಗಿಬಿಡುತ್ತಿದ್ದ. ಬಾಯಲ್ಲಿ ನೊರೆ ಬರಿಸಿಕೊಂಡು. ಅದು, ವೇಷ ಅಂದರೆ! ಇವರಿಬ್ಬರಿಗೂ ಇನ್ನೂ ಪರಿಶ್ರಮ ಸಾಲದು" ಅಂದು ಜಾನ್‌ಸ್ಮಿತ್.

ಶಿಷ್ಯದ್ವಯದ ವದನಾರವಿಂದಗಳು ಹರಳೆಣ್ಣೆ ಕುಡಿದಂತೆ ಪ್ರಕಾಶಿಸುತ್ತಿದ್ದವು.

ಜಾನ್‌ಸ್ಮಿತ್ ಮಂಚವನ್ನು ಪಕ್ಕಕ್ಕೆ ಜರುಗಿಸುವಂತೆ ಅವರಿಗೆ ಆಜ್ಞೆಮಾಡಿ ಹೇಳಿದ.

"ಯಾವೋನಾದರೂ ಬೈರಾಗಿ ಬಂದಾಗ ಹೀಗೇ ಹಿಂದು ಮುಂದು ಮಾಡಿ ನನ್ನ ತಲೇಗೆ ತಂದೀರಿ. ಇವತ್ತು ತಲಾ ನೂರು ರೂಪಾಯಿ ಫೈನು."

ಕಿವಿಯಲ್ಲಿ ನನ್ನ ಸ್ನೇಹಿತ ಹೇಳಿದ "ಕಣ್ಣು ಕಣ್ಣು ಬಿಡಬೇಡಿ. ನೂರು ನೂರು ಖೋಟಾ ರೂಪಾಯಿ" ಅಷ್ಟೆ.

"ಬೈರಾಗಿ ಯಾರು" ಅಂದೆ ನಾನು.

"ಕುಬೇರಾ ಕಾಲೊನಿಯಲ್ಲಿ C.I.D.ಗಳಿಗೆ ಬೈರಾಗಿ ಅಂತ ನಾಮಾಂಕಿತ" ಎಂದು ವಿವರಿಸಿದ ನನ್ನ ಸ್ನೇಹಿತ.

"ಇದೇ ಸ್ವಾಮಿ ನಮ್ಮ ಛಾಪಖಾನೆ. ಇದೋ ಇದೇ ಅಚ್ಚು ಯಂತ್ರ. ನಾನು, ಗುಲ್ಡು (ಆ ಹುಡುಗ), ವಿಶ್ವಾಮಿತ್ರ (ಸ್ತ್ರೀವೇಷಧಾರಿ), ಅವನಣ್ಣ ನಾಲ್ಕೇ ಜನ ಸೇರಿ ತಯಾರಿಸಿದ್ದು ಈ ಯಂತ್ರ" ಎಂದು ಮೊದಲು ಮಂಚವಿದ್ದ ಸ್ಥಳದಲ್ಲಿಟ್ಟಿದ್ದ ಚಿಕ್ಕ ಪೆಟ್ಟಿಗೆಯನ್ನು ತೋರಿಸಿದ ಜಾನ್‌ಸ್ಮಿತ್. ಮಗ್ಗುಲಲ್ಲಿದ್ದ ಒಂದು ಬೇಸಿನ್ನಿನಲ್ಲಿ ಹೊಸ ನೋಟುಗಳ ಕಂತೆಗಳಿದ್ದವು.

"ಇನ್ನೂ ಇಂಕು ಆರಿಲ್ಲ" ಅಂದ ಗುಲ್ಡು, ಒಂದು ನೋಟನ್ನ ನನ್ನ ಕೈಗೆ ಕೊಟ್ಟು.

"ನಿಮ್ಮ ಟ್ರೈನಿಂಗ್ ಎಲ್ಲಿ ಆದದ್ದು?" ಅಂದೆ, ಜಾನ್‌ಸ್ಮಿತ್‌ನ ಚಮತ್ಕಾರಕ್ಕೆ ಮರುಳಾಗಿ.

"ನಾನು ಹಿಂದೆ ಒಬ್ಬ ಪಾದ್ರಿಗೆ ಬಟ್ಲರ್ ಆಗಿದ್ದೆ. 1929ರಲ್ಲಿ ಅವರ ಹಿಂದೆ ಚಿಕಾಗೋಗೆ ಹೋಗಿ ಎರಡು ವರ್ಷ ಇದ್ದಿದ್ದರ ಉಪಕಾರ ಸ್ವಾಮಿ ಇದು. ನನಗೆ ಸಮಯ ಸಿಕ್ಕಿದಾಗಲೆಲ್ಲ ಹೋಗಿ ಖೋಟಾ ನೋಟು ತಯಾರಿಕೆಯ ವಿದ್ಯೆಯನ್ನು ಚೆನ್ನಾಗಿ ಅಭ್ಯಾಸ ಮಾಡಿದೆ".

"ನೀವು ನೂರರ ನೋಟನ್ನೇ ಹೆಚ್ಚಾಗಿ ತಯಾರಿಸುವ ಹಾಗೆ ಕಾಣುತ್ತೆ.." ಅಂದೆ.

"ಹೌದು. ಅದು ಯಾಕೇಂತೀರೋ, ಕೂತುಕೊಳ್ಳಿ ಹೇಳ್ತೇನೆ. ಈ ನೋಟುಗಳ್ನ ತಯಾರಿಸ್ತಿರೋ ಹಾಗೇ ಚಲಾವಣೇಲಿ ಸೇರಿಸಿಬಿಡಬೇಕು. ಕೈಲಿದ್ದಷ್ಟೂ ಆಪತ್ತು. ಹೌದೋ ಅಲ್ಲವೋ?"

"ಅಲ್ವೇ ಮತ್ತೆ!"

"ಈ ಕೆಲಸ ನೆರವೇರಿಸೋದಕ್ಕೆ ನನಗೆ ಬಹಳ ಜನ ಮಧ್ಯಸ್ಥರಿದ್ದಾರೆ. ಶೇಕಡಾ 50ರ ವರೆಗೆ ಕಮೀಷನ್ ಕೊಡುತ್ತೇವೆ, ಅನ್ನಿ. ಸಾವಿರ ರೂಪಾಯಿ ನೋಟನ್ನ ಎಂಥ ಮಡ್ಡಿ ಕೈಗೆ ಕೊಟ್ಟರೂ ಚಿಲ್ಲರೆ ಕೊಡುವ ಮುಂಚೆ ಸ್ವಲ್ಪ ತಾರಾಡುತ್ತಾನೆ. ಆದ್ದರಿಂದ ಮಧ್ಯಸ್ಥರು ಸಾವಿರದ ನೋಟುಗಳೇ ಬೇಡ ಅನ್ನುತ್ತಾರೆ. ಹತ್ತರ ನೋಟುಗಳನ್ನೇನೋ ಆಗಾಗ್ಗೆ ಅಚ್ಚು ಹಾಕುತ್ತೇವೆ, ನಮ್ಮ ನಮ್ಮ ಚಿಲ್ಲರೆ ಖರ್ಚುಗಳಿಗೆ. ಆದರೆ ಅದರಲ್ಲಿ ಉತ್ಪತ್ತಿ ಕಮ್ಮಿ. ಸಾವಿರ ನೋಟುಗಳನ್ನು ಅಚ್ಚು ಹಾಕಿದರೆ, ಕಮಿಷನ್‌ಗಿಮಿಷನ್ ಕಳೆದು ನನ್ನ ಕೈಸೇರೋದು ಇವತ್ತೆಲ್ಲ ಏನಪ್ಪ ಅಂದರೆ ಒಂದು ನಾಲ್ಕು ಸಾವಿರ ರೂಪಾಯಿ. ಒಟ್ನಲ್ಲಿ ಪಡುವ ಕಷ್ಟಕ್ಕೂ ಜವಾಬ್ದಾರಿಗೂ ತಕ್ಕ ಪ್ರತಿಫಲ ಸಿಗಬೇಕಾದರೆ ನೂರರ ನೋಟುಗಳಿಂದಲೇ"

"ಹಾಗಾದರೆ ಈ ನೂರರ ನೋಟುಗಳನ್ನು ಅಷ್ಟು ಸುಲಭವಾಗಿ ಚಲಾವಣೆಗೆ ತರಬಹುದೇ?"

"ನೀವೇ ಈಗತಾನೇ ಬಿದ್ದಿದ್ದಿರಲ್ಲ ಹಳ್ಳಕ್ಕೆ! ಹೊ ಹ್ಹೊ ಹ್ಹೋ! ಎಲ್ಲ ನಾವು ಇದು ಮಾಡೋ ಇದರಲ್ಲಿದೆ. ಸಾಧಾರಣವಾಗಿ ನಾವು ಹೊಸ ಮುಖಗಳನ್ನು ನೋಡಿಯೇ ನೋಟನ್ನು ದಬ್ಬೋದು. ನಮ್ಮ ಯಜ್ಞಪಶುಗಳು ರೈಲ್ವೇ ಸ್ಟೇಷನ್‌ಗಳಲ್ಲಿ, ಬಸ್ ಸ್ಟ್ಯಾಂಡುಗಳಲ್ಲಿ, ಹೋಟಲುಗಳಲ್ಲಿ, ಜಾತ್ರೆ ಸಂತೆಗಳಲ್ಲಿ ಬೇಕಾದ ಹಾಗೆ ಸಿಗುತ್ತವೆ. ದೊಡ್ಡ ಜವುಳಿಗಿವುಳಿ ಅಂಗಡಿಗಳಲ್ಲೂ ಹಾಕುವುದುಂಟು ಟೋಪೀನ – ಏನಾದರೂ ಬಟ್ಟೆ ಬರೆ, ಒಡವೆ ವಸ್ತು, ವ್ಯಾಪಾರ ಮಾಡಿ ಚಿಲ್ಲರೆ ಪಡೆಯುತ್ತೇವೆ. ಅಂಥ ಸಂದರ್ಭದಲ್ಲಿ ಕೊಂಡ ವಸ್ತುಗಳನ್ನು ಭಾನುವಾರ ಭಾನುವಾರ ಹರಾಜು ಹಾಕಿ, ಸಂದಾಯವಾದದ್ದನ್ನ ನಾವೂ ಮಧ್ಯಸ್ಥರೂ ಹಂಚಿಕೋತೇವೆ".

"ನಿಮ್ಮ ಮಧ್ಯಸ್ಥರು ಯಾರೂ ಇದುವರೆಗೆ ಸಿಕ್ಕಿಬಿದ್ದಿಲ್ಲವೋ?"

"ಅದೇ ಹೇಳಿದೆನಲ್ಲ; ಎಲ್ಲ ಅವರ ಹುಷಾರಿಮೇಲೆ ಹೋಗುತ್ತೆ– ನಮ್ಮ ಪ್ರತಿ ಒಂದು– ಲೋ ಗುಲ್ಡು, ಆ 'ಲಾಂಡ್ರಿ' ತಾ ಇಲ್ಲಿ – ಇಗೋ ಈ ಪೆಟ್ಟಿಗೇಲಿ ಹಾಕಿ ಕುಲುಕ್ತೇವೆ. ಹೊಸನೋಟಾಗಿದ್ದದ್ದು, ಇಗೋ ಒಂದು ವರ್ಷವಾದರೂ ವಯಸ್ಸಾದ ಬಣ್ಣಕ್ಕೆ ಬಂದುಬಿಡುತ್ತೆ. ಯಾವ ಸಂಶಯವೂ ಇಲ್ಲದೆ ಚಲಾಯಿಸಿ

ಹೋಗುತ್ತೆ. ಅಲ್ಪಜೀವಿಯಾದ ಯಾವನಾದರೂ ಏಜಂಟು ಸಿಕ್ಕಿಬಿದ್ದರೂ ನಮಗೆ ಅಂಥಾ ಹೆದರಿಕೆ ಏನಿಲ್ಲ. ನಮ್ಮ ಕುಬೇರಾ ಕಾಲೊನಿಯಲ್ಲಿ ಇಂಥ ಪ್ರಿಂಟಿಂಗ್ ಪ್ರೆಸ್‌ಗಳು ಮೂರಿವೆ. ಒಬ್ಬರಿಗೊಬ್ಬರಿಗೆ ವ್ಯಾಪಾರ ವಿಷಯದಲ್ಲಿ ಪೈಪೋಟಿ ಇದ್ದರೂ, ಬೈರಾಗಿಗಳ ವಿಚಾರದಲ್ಲಿ ಮಾತ್ರ ನಾವೆಲ್ಲಾ ಒಂದಾಗಿಬಿಡುತ್ತೇವೆ. ಒಬ್ಬರನ್ನೊಬ್ಬರು ಬಿಟ್ಟುಕೊಡುವುದಿಲ್ಲ. ನಮ್ಮ ಮಧ್ಯಸ್ಥರು ಯಾರಾದರೂ ಸಿಕ್ಕಿಕೊಂಡಾಗ, ಹಿಡಿದ ಬೈರಾಗಿಗೆ ಸಾಚಾ ಅಪ್ಪಟ ಹಣದಲ್ಲಿ ಒಂದು ಚೊಕ್ಕಟ ನೂರು ರೂಪಾಯಿ ಅನಧಿಕೃತ ಜುಲ್ಮಾನೆ ಕೊಡಬೇಕಂತ.. ಒಂದು ಒಪ್ಪಂದ ಇದೆ."

"ಓಹೋ!... ಹಾಗಂದ್ರೆ..."

"ಹೌದು ಅದೇ! ಆ ಒಪ್ಪಂದ ಇರೊವರೆಗೆ ನಮ್ಮ ವ್ಯಾಪಾರಕ್ಕೆ ಯಾವ ತೊಂದರೇನೂ ಇಲ್ಲ".


"ಒಂದೊಂದು ಸಲ ಬೈರಾಗಿಗೆ ಕುಬೇರಾ ಪ್ರೆಸ್ಸಿನ ನೋಟನ್ನೇ ಕಾಣಿಕೆ ಕೊಟ್ಟು ಸಾಗುಹಾಕಿರುವ ಪ್ರಸಂಗವೂ ಉಂಟು" ಎಂದು ಸೇರಿಸಿದ, ನನ್ನ ಸ್ನೇಹಿತ.

ಅದರ ಹಾಸ್ಯವನ್ನು ಗ್ರಹಿಸಿ ಎಲ್ಲರೂ ಸ್ವಲ್ಪಹೊತ್ತು ನಗುತ್ತಿದ್ದೆವು.

ಗಂಟೆ ಎಂಟಾಗಿತ್ತು. ಒಳ್ಳೇ "ಮೆಣಸಿನಕಾಯಿ" ಗುರ್ತಿನ ಖಾರವಾದ ಮಂಗಳೂರು ಬೀಡಿಯೊಂದನ್ನು ನಮ್ಮಿಬ್ಬರಿಗೂ ಕೊಟ್ಟು ಸತ್ಕರಿಸಿ ಜಾನ್‌ಸ್ಮಿತ್ ನಮ್ಮಿಬ್ಬರನ್ನೂ ಕಳುಹಿಸಿಕೊಟ್ಟ.

■

---



# ಕ್ಯಾಟ್ರಿಪಿಲರ್‌ನ ಕಾಸ್ಟಿಕ್ ಕಾಂಫರೆನ್ಸು

● **ಎನ್. ರಾಮನಾಥ್**

'ಇಷ್ಟೆಲ್ಲ ಅಸಹ್ಯವಾಗಿ ಇರಕ್ಕೆ ನಾಚಿಕೆ ಆಗಲ್ವಾ ನಿನಗೆ?' ಎಂದೆ.

ದಟ್ಟಕೂದಲಿನ ಕಪ್ಪು ಕರಡಿಯ ಕಿರುಬೆರಳಿನ ಮಿನಿ ವರ್ಷನ್ ಆದ ಕಂಬಳಿಹುಳ 'ನರಮನುಷ್ಯರಿಗೇ ಇಲ್ಲದ ನಾಚಿಕೆ ನನಗೇಕೆ?' ಎಂದು ಸವಾಲೆಸೆಯಿತು.

'ಎಲ್ಲಿದೆ ಹೋಲಿಕೆ?'

'ನರರೂ ಕಂಬಳಿಹುಳಗಳೇ... ನೋಡು... ಈ ತರಹದ ಕಂಬ್ಳಿಹುಳಗಳು' ಎನ್ನುತ್ತಾ ಶವಾಸನದಲ್ಲಿ ಮಲಗಿಕೊಂಡಿತು.

'ಈ ಭಂಗಿಯ ಹಿಂದಿನ ಮರ್ಮವೇನು ರಗ್‌ವರ್ಮ್?' ಎಂದೆ. ಕನ್ನಡಿಗರಿಗೆ ನಾಮಪದವನ್ನು ಆಂಗ್ಲೀಕರಿಸಿ ಕರೆಯಲು ಅದೇನೋ ಉತ್ಸಾಹ, ಆತುರ, ಹೆಮ್ಮೆ.

'ನಾನು ಹೊರಗೆ ಚೂಪುಕೂದಲುಗಳನ್ನು ಹೊಂದಿ, ಒಳಗೆ ಲೇಟೆಂಟ್ ಚಿಟ್ಟೆಯ ಸುಂದರ ರೂಪವನ್ನು ಹೊಂದಿದ್ದೇನೆ. ನೀವು ಮನುಷ್ಯರು ಉಲ್ಟಾ – ಬಾಹ್ಯದಲ್ಲಿ ಮೇಕಪ್ಪು, ಅಂತರಂಗದಲ್ಲಿ ಆಬ್ಸಲ್ಯೂಟ್ಲೀ ಕಪ್ಪು. ನಿನ್ನ ಲೇಟೆಸ್ಟ್ ಅಕೌಂಟ್ಸ್ ಫೈಲ್ ಮಾಡಿದೆಯೇನಯ್ಯ? ವೈಟಲ್ಲಿ ಎಷ್ಟಿದೆ, ಬ್ಲಾಕಲ್ಲಿ ಎಷ್ಟು? ಹಣ ಕಪ್ಪಿರಬೇಕು, ಕುದುರೆ ಕಪ್ಪಿರಬೇಕು, ಕೂದಲು ಕಪ್ಪಿರಬೇಕು; ಕುಡಿಯಲು ಕಪ್ಪಿರಬೇಕು... ಓಹ್! ಕ್ಷಮಿಸು... ಶ್ಲೇಷೆಯ ಮನುಷ್ಯನ ಮನೆಯ ಎಲೆ ತಿಂದ ಕಾರಣ ಅರ್ಥವಿರುವ ಅಪಾರ್ಥಕ್ಕೆ ಎಡೆಯಾಯಿತು. ಅಂತೂ ಅನುಕೂಲಕ್ಕಷ್ಟು ಕಪ್ಪು ಉಳಿಸಿಕೊಳ್ಳುವ ನಿಮಗೆ ಕಪ್ಪು ಕಂಬಳಿಹುಳ ಎಂದರೆ ತಾತ್ಸಾರ. ಬ್ಲಾಕ್ ಲೈವ್ಸ್ ಮ್ಯಾಟರ್ ಮಿಸ್ಟರ್' ಉಪನ್ಯಾಸಕ್ಕೇ ತೊಡಗಿದ ರಗ್ವರ್ಮು ಹೋದ ಜನ್ಮದಲ್ಲಿ ಕನ್ನಡ ಲೆಕ್ಚರರ್ ಆಗಿತ್ತೋ ಏನೋ.

'ಕರಿ ಬಣ್ಣದ ಬಗ್ಗೆ ನನ್ನದೇನೂ ತಕರಾರಿಲ್ಲ. ಚೂಪೇಕೆ?'

'ಆಹಾಹಾ! ನಿನ್ನ ಗಡ್ಡ ಮೀಸೆಗಳು ಹಂಸತೂಲಿಕದಂತೆ ಇವೆಯೇನು? ಬೆಂಕಿಕಡ್ಡಿಯನ್ನು ಗಡ್ಡದ ಕೂದಲಿನ ತುದಿಗೆ ಉಜ್ಜಿದರೆ ಭರ್ರನೆ ಹೊತ್ತಿಕೊಂಡೀತು. ಗಡ್ಡ ಚೂಪೋ ಇಲ್ಲವೋ ಎಂದು ತಿಳಿದಿರುವುದು ಗಂಡಸರಿಗಲ್ಲ, ಹೆಂಗಸರಿಗೆ. ಫಿಸಿಕಲ್ ಆಸ್ಪೆಕ್ಟ್ ಬಿಟ್ಟು ಮೆಂಟಲ್ ಆಸ್ಪೆಕ್ಟ್ ನ ಕನ್ನಡಿಯಲ್ಲಿ ನಿನ್ನ ಬಿಂಬವನ್ನು ನೋಡಿಕೊ. ನಿನ್ನ ಹೆಂಡತಿಗಿಂತ ಸುಂದರಿಯಾಗಿರುವ ನೆರೆಮನೆಯವಳ ಪತಿಯನ್ನು ಕಂಡರೆ ನನ್ನ ಮೈಮೇಲಿನ ಕೂದಲಿನ ಚೂಪಿಗಿಂತಲೂ ಚೂಪಾದ ಆಲೋಚನೆಗಳು ನಿನ್ನಲ್ಲಿ ಮೂಡುತ್ತಿಲ್ಲವೇನು? ಕುಳಗಳಿಗೆ ತಿಳಿಯದ ಅಂಶಗಳು ಹುಳಗಳಿಗೆ ತಿಳಿಯುತ್ತವಯ್ಯಾ' ಇಷ್ಟೇ ಮೂತಿಯನ್ನು ಅಷ್ಟಗಲ ಅಗಲಿಸಿ ಗಹಗಹಿಸಿತು ರಗ್‌ವರ್ಮು.

'ನಿನಗೇನು ಬಿಡು ವರ್ಮೂ... ಯಾರೋ ತಂದುಹಾಕಿದ್ದನ್ನೋ, ಯಾರೋ ಬೆಳೆದಿದ್ದನ್ನೋ ತಿಂದು ಬೆಳೆಯುವೆ' ಕಿಚಾಯಿಸಿದೆ.

'ಪತ್ತೇ ಪತ್ತೇ ಪರ್ ಲಿಖಾ ಹೈ ಖಾನೆ ಕಮ್ಲಾ ಕಾ ನಾಮ್' ಅನ್ನೋ ಗಾದೆ ಕೇಳಿಲ್ವೇನು? 'ಕಮ್ಲಾ' ಅಂದ್ರೆ ಬಿಜೆಪಿ ಅಂತ ಅರ್ಥ ಮಾಡ್ಕೋಬೇಡ. ತಿನ್ನೋ ವಿಷಯದಲ್ಲಿ ಎಲ್ಲ ಪಕ್ಷದವರೂ ಒಂದೇ. ನನ್ನ ಹಿಂದಿ ಹೆಸರಾದ 'ಕಮ್ಲಾ'ವನ್ನ

ಅರೆಹಿಂದಿ–ಅರೆ ಇಂಗ್ಲಿಷ್‌ನಲ್ಲಿ ಓದಿದರೆ 'ಕಡಿಮೆ ನ್ಯಾಯ' ಅಥವಾ 'ನ್ಯಾಯಹೀನ' ಅನ್ನೋ ಅರ್ಥ ಮೂಡತ್ತೆ. ಎಲ್ಲ ಪಕ್ಷಗಳವರೂ 'ಕಮ್ಲಾ'ಗಳೇ – ನಿನಗೆ ನನ್ನನ್ನ ನೋಡಕ್ಕೆ ಆಗೋದಕ್ಕಿಂತ ಹೆಚ್ಚಿನ ಅಸಹ್ಯ ನನಗೆ ಅವರನ್ನ ನೋಡಿದಾಗ ಆಗತ್ತೆ' ಕಣ್ಣು ಹಿಗ್ಗಿಸಿ ಶಕ್ತಿಮೀರಿ ಕೆಂಡ ಕಾರಿತು.

'ನೀನೇನೇ ಹೇಳು, ಪ್ರಕೃತಿ ನಿನಗೆ ಮೋಸ ಮಾಡಿದೆ. ಕೊಂಚವಾದರೂ ಅಂದ ಇರಬೇಕಿತ್ತು' ಅದೇ ಹಾಡು ಹಾಡಿದೆ. ಹಾಡಿನ ಪಲ್ಲವಿಗೆ ರಿಪೀಟ್ ಆಗುವ ಲೈಸೆನ್ಸ್ ಇದೆಯಲ್ಲ.

'ಇದೇ ಮಾತನ್ನ ಕರಡಿಗೆ ಹೇಳು ನೋಡೋಣ...' ಎಂದಿತು ರಗ್‌ವರ್ಮ್ಸ್. ಹಿಂದೂ ದೇವತೆಗಳು, ಧರ್ಮ, ಆಚರಣೆ ಮುಂತಾದವನ್ನು ಹೀಗಳೆದಾಗ, ಅವಮಾನ ಮಾಡಿದಾಗ 'ಮುಸ್ಲಿಮರನ್ನು ಅಂದು ಬದುಕಿ ನೋಡೋಣ...' ಎನ್ನುವ ಪುರುಷಸಿಂಹಗಳೇ ನೆನಪಾದವು.

'ನಿಮ್ಮದು ಡಬಲ್ ಸ್ಟ್ಯಾಂಡರ್ಡ್' ಮುಂದುವರಿಸಿತು ಕಂಬಳಿಹುಳ, 'ಕಪ್ಪನೆಯ ಜೂಲುನಾಯಿಯನ್ನು ಸಾಕಿದಾಗ ಅದಕ್ಕೆ ಕಟಿಂಗ್, ಶಾಂಪೂ ಬಾತ್, ಪೌಡರ್ ಎಲ್ಲದರ ಸೇವೆ ನಡೆಯುತ್ತದೆ. ಕಪ್ಪುಕುದುರೆಗೆ ಸಿಗುವಷ್ಟು ಮಾಲಿಶ್ ಸೇವೆ ಯಾವ ಅರಬ್ ರಾಜನಿಗೂ ದೊರೆಯದು. ಆದರೆ ಬೃಹದಾಕಾರದ ಕರಡಿಗೆ ಒಂದು ದಿನವಾದರೂ ಕಟಿಂಗ್ ಮಾಡಲು ಆಲೋಚಿಸಿದ್ದೀರಾ? ಕಂಬಳಿಹುಳವೂ ಮ್ಯಾನಿಕ್ಯೂರ್ ಪೆಡಿಕ್ಯೂರ್‌ಗಳಂತೆ 'ಬಾಡಿಕ್ಯೂರ್' ಮಾಡಿಸಿಕೊಂಡು ಕೇಶವನ್ನು ಟ್ರಿಮ್ ಮಾಡಿಸಿಕೊಂಡರೆ ಚೆನ್ನಾಗಿ ಕಾಣಬಹುದು ಎಂದು ಎಂದಾದರೂ ಅನ್ನಿಸಿದೆಯೆ?' ಹುಳುವಿನಿಂದ ಮಾನಹಾನಿ ಎಂದು ನನ್ನ ಅಂದಿನ ದಿನಭವಿಷ್ಯದಲ್ಲಿ ಬರೆದಿತ್ತೋ ಏನೋ!

'ನಿನ್ನ ರೂಪದ ವಿಷಯ ಬಿಟ್ಟುಬಿಡೋಣ. ಸಿಕ್ಕ ಸಿಕ್ಕ ಕಡೆಯಲ್ಲಿ ಸುಳಿದಾಡಿಕೊಂಡು, ಕೊಂಬೆಗಳಿಗೆ ರಗ್ ಹೊದಿಸಿದಂತೆ ಹರಡಿರುತ್ತೀರಲ್ಲ, ನಮಗೆ ಎಷ್ಟು ಭಯ, ರೇಜಿಗೆ ಅಸಹ್ಯ ಆಗುತ್ತೆ ಗೊತ್ತೇನು...' ಎಂದೆ.

'ನೀವು ಮನುಷ್ಯರೇ ಕಚಡಾಗಳು. ಪ್ಲ್ಯಾನ್ ತೋರಿಸಿ, ಡಾಕ್ಯುಮೆಂಟ್ ತೋರಿಸಿ, ಅಪಾರ್ಟ್ಮೆಂಟ್ ಮಾರಿ, ಅವರೆಲ್ಲ ನಮ್ಮಂತೆಯೇ ಅಪಾರ್ಟ್ಮೆಂಟಿನ ಕೊಂಬೆಗಳಿಗೆ ಅಂಟಿಕೊಂಡಿರುವಾಗ 'ಅಕ್ರಮ' ಅನ್ನುತ್ತಾ, ನಮ್ಮನ್ನು ರೆಂಬೆಯಿಂದ ಬೀಳಿಸುವಂತೆಯೇ, ಅವರನ್ನು ಬೀದಿಗೆ ಬೀಳಿಸುವ ನೀವುಗಳು ಹುಳಗಳಲ್ಲವೆ? ಹುಳುಗಳಿಗಿರುವ ಮನುಷ್ಯತ್ವ ನಿಮಗಿಲ್ಲ' ಫುಲ್ ರಾಂಗ್ ಆಯಿತು ರಗ್‌ವರ್ಮ್ಸ್.

'ಇಷ್ಟೆಲ್ಲ ಕೂಗಾಡಿದರೆ ಇಲ್ಲ ಅನ್ನಿಸಿಬಿಡ್ತೀನಿ ನೋಡು'

'ಹ್ಞು! ನಾನಿಲ್ಲದೆ ಚಿಟ್ಟೆ ಇಲ್ಲ; ಚಿಟ್ಟೆ ಇಲ್ಲದೆ ಪರಾಗಸ್ಪರ್ಶವಿಲ್ಲ. ಪರಾಗಸ್ಪರ್ಶವಿಲ್ಲದೆ ಗಿಡಗಳೇ ಇಲ್ಲ. ಚೆನ್ನಾಗಿ ಅರಿತುಕೋ, ಯಾವ ದಿನ ಪ್ರಪಂಚದ ಎಲ್ಲ ಕಂಬಳಿಹುಳಗಳು, ಜೇನುನೊಣಗಳು ಇಲ್ಲವಾಗುತ್ತವೋ ಅಂದಿನಿಂದ ಕೆಲವೇ ವರ್ಷಗಳಲ್ಲಿ ಭೂಮಿಯ ಸರ್ವನಾಶ' ರೊಚ್ಚಿನಿಂದ ರೇಗಿತು ಕಂಬಳಿಹುಳ.

'ಓಕೆ ಓಕೆ. ಮನೆಯಲ್ಲಿ ಮಡದಿಯಿಂದ, ಆಫೀಸಲ್ಲಿ ಬಾಸ್‌ನಿಂದ ಬೈಸಿಕೊಂಡು ನೊಂದು ಬೆಂದು ಬಸವಳಿದಿದ್ದೇನೆ. ನೀನೂ ಗದರಬೇಡ. ರೂಪ ಹಾಳಾಗಲಿ... ಐ

ಮೀನ್... ಹಾಳಾಗಕ್ಕೆ ಅಲ್ಲೇನು ಉಳಿದಿದೆ... ವಾಟ್ ಐ ಮೀನ್ ಈಸ್... ನಿನ್ನ ನಡಿಗೆ... ಅದೇಕೆ ಅಷ್ಟೊಂದು ನಿಧಾನವಾಗಿ ಚಲಿಸುವುದು?'

'ನಮ್ಮನ್ನು ನೋಡಿ ನಿಮ್ಮ ವ್ಹೀಲಿಂಗ್ ಹುಡುಗರು ಕಲಿಯಬೇಕು. 'ಅತಿ ವೇಗ ತಿಥಿ ಬೇಗ' ಅನ್ನೋದನ್ನ ಅಲ್ಲಲ್ಲಿ ಓದಿಯೂ 'ಫಾಸ್ಟ್ ಅನ್‌ಟು ಡೆತ್' ಅನ್ನುವ ಶೀಘ್ರಗಾಮಿಗಳು ಲೈಟ್ ಬಲ್ಬಿನಂತೆ ಭಕ್ಕನೆ ಆರಿಹೋಗ್ತಾರೆ. ನಮ್ಮದು ಹಣತೆಯ ಜೀವನ. ಕಡೆಯ ಡ್ರಾಪ್ ಎಣ್ಣೆ, ಕಡೆಯ ಮಿಲಿಮೀಟರ್ ಬತ್ತಿ ಇರುವವರೆಗೆ ಜೀವಿಸೋವ್ರು. ಅಷ್ಟಕ್ಕೂ ನಿನಗೆ ನನ್ನ ಸ್ಲೋನೆಸ್ ಬಗ್ಗೆ ಮಾತಾಡಕ್ಕೇನು ಅಧಿಕಾರ ಇದೆ? ನೀನೇ ಆರಿಸಿದ ಸರ್ಕಾರ ನಡೆಸುವ ಕಚೇರಿಗಳ ಎಲ್ಲ ಕೆಲಸಗಳೂ ನನ್ನ ನಡೆಗಿಂತಲೂ ನಿಧಾನವೇ. ಅತ್ತ ಸರಿ. ನನಗೆ ಕೋಶ ಸೇರುವ ಕಾಲ ಸಮೀಪಿಸಿದೆ. ಕೋಶದಿಂದ ಸುಂದರ ಚಿಟ್ಟೆಯಾಗಿ ಹೊರಬರುವ ಜವಾಬ್ದಾರಿಯಿದೆ. ಹೊರಡು. ಮುಂದಾದರೂ ಸುಂದರ ಜೀವಿ ಆಗಲು ಯತ್ನಿಸು' ಎನ್ನುತ್ತಾ ಕೋಶಗಮನಿಯಾಯಿತು ರಗ್‌ವರ್ಮ್.

■



# ಕಳ್ಳ ಪೊಲೀಸ್ ಆಟ!

● ಇ.ಆರ್. ರಾಮಚಂದ್ರನ್

ಎಪ್ಪತ್ತರ ದಶಕದಲ್ಲಿ ನಾನು ಬೊಂಬಾಯಿ (ಈಗ ಮುಂಬಯಿ) ಎಲೆಕ್ಟ್ರಾನಿಕ್ಸ್ ಕಮಿಷನ್ನಲ್ಲಿ ಕೆಲಸ ಮಾಡುತ್ತಿದ್ದಾಗ ಹೊರ ದೇಶದಿಂದ ಬಂದಿದ್ದವನನ್ನ ನೋಡಲು ತುರ್ತಾಗಿ ದೆಹಲಿಗೆ ಹೋಗಬೇಕಾಗಿತ್ತು.

ಬೊಂಬಾಯಿಂದ ಬೆಳ್ಳಂಬೆಳಗ್ಗೆ ಫ್ಲೈಟ್‌ನಲ್ಲಿ ಹೋಗಿ ಅವನು ಇಳಿದುಕೊಂಡ ಹೋಟಲ್ನಲ್ಲಿ ಸಂಧಿಸಿ ಲಘು ಉಪಹಾರದ ಮಧ್ಯೆ ಕೆಲಸದ ಮಾತುಕಥೆಯಾಯಿತು. ಒಂದೆರೆಡು ಘಂಟೆಯಲ್ಲಿ ನಮ್ಮ ಕೆಲಸವೂ ಮುಗಿಯಿತು.

ಅವನು ರಾತ್ರಿ ಆಸ್ಟ್ರೇಲಿಯಾಕ್ಕೆ ಹೊರಡುವನಿದ್ದ.

ನಮ್ಮ ಕೆಲಸಕ್ಕೆ ಒಂದು ದಿವಸಬೇಕಾಗಬಹುದೆಂದು ಮುಂಚೆಯೇ ಪ್ಲಾನ್ ಮಾಡಿಕೊಂಡಿದ್ದೆವು. ಹಾಗಾಗಿ ನನ್ನ ವಾಪಸ್ಸು ಪ್ರಯಾಣ ಮರುದಿನಕ್ಕೆ ಮಾಡಿಕೊಂಡಿದ್ದೆ. ಕೆಲಸ ಬೇಗ ಮುಗಿದಿದ್ದರಿಂದ ಆ ದಿನವೇ ವಾಪಸ್ಸು ಹೋಗೋಣ ಅಂತ ಎಣಿಸಿ ಕನಾಟ್ ಪ್ಲೇಸಿನಲ್ಲಿದ್ದ ಇನ್ಡಿಯನ್ ಏರ್ಲೈನ್ಸ್ ಆಫೀಸಿಗೆ ಹೋದೆ. ಅಲ್ಲಿ ವಿಚಾರಿಸಿದಾಗ ಅವರು ಆ ದಿನವೇ ಟಿಕೆಟ್ ಬದಲಾಯಿಸ ಬೇಕಾದರೆ ಏರ್ಪೋರ್ಟ್ಗೆ ಹೋಗಬೇಕು. ಇಲ್ಲೇ ಇದ್ದು ಕಾದು ನೋಡಿ. ಇವತ್ತಿನ ಬದಲು ನಾಳೆ ಹೋಗಬೇಕೆನ್ನುವರು ಕೆಲವು ಸಮಯ ಇಲ್ಲಿ ಬರುತ್ತಾರೆ. ಸ್ವಲ್ಪ ವೈಟ್ ಮಾಡಿ ನೋಡಿ ಅಂದರು.

ಅವರು ಹೇಳಿದ ಹಾಗೆ ಯಾರೋ ಒಬ್ಬರು ಏರ್ ಲೈನ್ಸ್ ಆಫೀಸರ್ ಹತ್ತಿರ ಹೋಗಿ, ನನ್ನ ಟಿಕೆಟ್ ಇವತ್ತಿಗೆ ಇದೆ. ನಾಳೆಗೆ ಮಾಡಿಕೊಡಿ ಎಂದು ಬಂದರು.

ಆಫೀಸರ್ ನಮ್ಮಿಬ್ಬರನ್ನು ಪರಿಚಯ ಮಾಡಿಸಿ ನಾವಿಬ್ಬರೂ ಟಿಕೆಟನ್ನು ಅದಲು ಬದಲು ಮಾಡಿಕೊಂಡು ಕೈಕುಲುಕಿ ಹೊರಟೆವು.

ಬೇಗ ಹೋಗುವುದಕ್ಕೆ ನನಗೆ ಇನ್ನೊಂದು ಕಾರಣ ವಿತ್ತು. ಬೊಂಬಾಯಿಯಲ್ಲಿ ಮೈಸೂರು ಅಸೋಸಿಯೇಷನ್ ಸಂಸ್ಥೆಯವರು ಗುಜರಾತಿಗಾಗಿ ಫ್ಲಡ್ ರಿಲೀಫ್ಗಾಗಿ ಫಂಡ್ ಆಯೋಜಿಸಿ ಅದಕ್ಕಾಗಿ ವೈಜಯಂತಿಮಾಲಾಳ ಭರತ ನಾಟ್ಯದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರು. ನಾನು ಅಲ್ಲಿಗೆ ಸದಸ್ಯನಾಗಿದ್ದರಿಂದ ಕೆಲವು ಕೆಲಸವನ್ನು ಹಮ್ಮಿಕೊಂಡಿದ್ದೆ. ಡೆಲ್ಲಿಯಲ್ಲಿ ವ್ಯರ್ಥವಾಗಿ ಕಾಲ ಕಳೆಯುವುದರ ಬದಲು ಅಲ್ಲಿಗೆ ಹೋಗಿ ಕೆಲಸವನ್ನು ಮಾಡಿದರೆ ಒಳ್ಳೆಯದೆಂದು ತೋರಿತು.

ಸಂಜೆಯವರಿಗೆ ಟೈಮ್ ಇದ್ದರಿಂದ ಗ್ರೀನ್ ಪಾರ್ಕನಲ್ಲಿದ್ದ ನನ್ನ ಸ್ನೇಹಿತನನ್ನು ನೋಡ ಬಯಸಿ ಅವನಿಗೆ ಫೋನ್ ಮಾಡಿದೆ. ನೀನು ಮನೆಗೆ ಹೋಗಿರು ನಾನು ಮದ್ಯಾಹ್ನ ಮನೆಗೆ ಬರುತ್ತೇನೆಂದ. ನನ್ನ ರೂಮ್ ಮೇಟ್ ಸುರೇಶನಿಗೆ ನೀನು ಬರುವುದನ್ನು ಹೇಳ್ತಿನಿ.

ಸುರೇಶನಿಗೆ ಸಿಬಿಐನಲ್ಲಿ ಆಫೀಸರಾಗಿ ಕೆಲಸ. ಚಿಕ್ಕವಯಸ್ಸಿನವನಾದರೂ ಚುರುಕು; ಹುದ್ದೆಯಲ್ಲಿ ಬೇಗ ಮುಂದೆ ಬಂದವ.

ನಾನು ಬಂದ ಕೆಲಸ ಹೇಳಿ ಟಿಕೆಟ್ ಬದಲಾಯಿಸಿಕೊಂಡು ಇಂದೆ ವಾಪಸ್ಸು

ಹೋಗುವುದನ್ನು ಅವನಿಗೆ ಹೇಳಿದೆ.

ಅದನ್ನು ಕೇಳಿದಾಗ ಸುರೇಶನ ಚಹರೆ ಸ್ವಲ್ಪ ಬದಲಾಯಿತು...

' ಇವತ್ತು ನೀವು ಟಿಕೆಟ್ನ ಬದಲಾಯಿಸಿಕೊಂಡವನು ನಿಮಗೆ ಗುರುತೇ ಅಥವ ಸ್ನೇಹಿತನೇ ?'

'ಇಲ್ಲಪ್ಪ.. ಅವನು ಏರ್ ಲೈನ್ಸ್ ಆಫೀಸಿನಲ್ಲಿ ಸಿಕ್ಕಿದ ಅಷ್ಟೆ. ಅವನೂ ಟಿಕೆಟ್ ಎಕ್ಸ್ಚೇಂಜಿಗೆ ಬಂದಿದ್ದ.'

'ಹಾಗಾದ್ರೆ ಇವತ್ತು ರಾತ್ರಿ ನೀವು ಅವನ ಹೆಸರಿನಲ್ಲಿ ಪ್ರಯಾಣ ಮಾಡ್ತಿದೀರಾ... ಅವನು ಯಾರಂತ ಗೊತ್ತಿಲ್ಲ.. ಅವನು ಯಾವುದಾದರೂ ಗಾಂಜ, ಅಫೀಮು ಡ್ರಗ್ಸ್ಗಳಲ್ಲಿ ಕೇಸಿನಲ್ಲೋ ಅಥವ ಕೊಲೆ ಮಾಡಿ ತಪ್ಪಿಸಿಕೊಂಡಿದ್ದರೆ ಅಂಥವನಿಗೆ ಪೊಲೀಸ್ ಸಾಮಾನ್ಯವಾಗಿ ಏರ್ಪೋರ್ಟ ಅಂತಹ ಜಾಗದಲ್ಲಿ ಕಾಯ್ತಿರ್ತಾರೆ...ನೀವು ಅವನ ಹೆಸರಿನಲ್ಲಿ ಟ್ರಾವಲ್ ಮಾಡ್ತಿದೀರಾ ಅಲ್ವ?' ಎಂದ ಸುರೇಶ.

ನನ್ನ ಹಣೆಯ ಮೇಲೆ ಡೆಲ್ಲಿಯ ಡಿಸೆಂಬರ್ ಛಳಿಯಲ್ಲೂ ಬೆವರು ಬರಲು ಶುರುವಾಯಿತು. ಅಷ್ಟು ಹೊತ್ತಿಗೆ ಬಂದ ನನ್ನ ಸ್ನೇಹಿತ ನನಗೆ ಕುಡಿಯಲು ನೀರು ಕೊಟ್ಟ. ಏನಾಗಿದೆಯೆಂದು ಸುರೇಶ ಅವನಿಗೆ ಹೇಳಿದ.

' ಆ ತರಹ ಆಗಿದ್ದರೆ ಅಷ್ಟೇ ಅಲ್ಲ..' ಸುರೇಶ ಮುಂದುವರಿಸಿದ...' ಡೆಲ್ಲಿ ಪೋಲೀಸಿನವರು ಎಲ್ಲಾ ಏರ್ಪೋರ್ಟಗೆ ನೀವು ಡೆಲ್ಲಿಲಿ ಫ್ಲೈಟ್ ತೊಗೊಂಡಿದ್ದು ಇನ್ಫರ್ಮೇಶನ್ ಎಲ್ಲಾ ಏರ್ಪೋರ್ಟಗೆ ಫ್ಲಾಷ್ ಮಾಡಿ ಅಲರ್ಟ ಮಾಡ್ತಾರೆ. ಬೊಂಬಾಯಿ ಏರ್ ಪೋರ್ಟನಲ್ಲಿ ಪೋಲೀಸ್ ನಿಮಗಾಗಿ ಕಾದಿರ್ತಾರೆ'.

ನನಗೆ ಸಣ್ಣದಾಗಿ ನಡುಕ ಶುರುವಾಯಿತು. ನಾಲಿಗೆ ಒಣಗಿತು. ಮತ್ತೆ ನೀರು ಕುಡಿದೆ.

ಸುರೇಶ ಬಿಡ್ತಾನೇ ಇಲ್ಲ.

'ಇನ್ನೊಂದು ವಿಷಯ... ಇವತ್ತು ಅವನು ಡೆಲ್ಲಿಯಲ್ಲಿ ನಿಮ್ಮ ಹೆಸರಿನಲ್ಲಿ ಇರ್ತಾನೆ.. ಅವನು ಇಲ್ಲಿ ಏನು ಮಾಡಿದರೂ ಅದು ನಿಮ್ಮ ಹೆಸರಿನಲ್ಲೇ.. ನೀವು ಇಲ್ಲೇ ಇರ್ತೀರೆಂದು ನಿಮ್ಮ ಆಫೀಸಿಗೆ ಗೊತ್ತಿದೆ. ಈಗ ಅವನಿಗೂ ಅದು ಗೊತ್ತಿದೆ. ನೀವು ಡೆಲ್ಲಿಯಲ್ಲಿ ಇದ್ರಿ ಅನ್ನೋ ವಿಷಯಾನ ಅವನು ಇವತ್ತು ಹೇಗೆ ಬೇಕಾದರೂ ಉಪಯೋಗಿಸ ಬಹುದು.'

ಎಲ್ಲಾ ಬಿಟ್ಟು ಇವನ್ನ ಯಾಕಾದ್ರೆ ಬಂದು ನೋಡಿದೆ ಅಂತ ಅನ್ನಿಸ್ತು. ಆದರೆ ಸುರೇಶ ಬಿಟ್ರೆ ತಾನೆ?

' ನಿಮ್ಮ ಟಿಕೆಟ್ ಇಟ್ಟುಕೊಂಡು ನಾಳೆ ಅವನು ಪ್ಲೇನಿನಲ್ಲಿ ಬೊಂಬಾಯಿಗೆ ಹೊರಡ್ತಾನೆ. ಅವನ ಫೋಟೋ ಚಹರೆ ಗುರ್ತಿದ್ದರೆ ಬೇರೆ ಹಸರಿನಲ್ಲಿ – ನಿಮ್ಮ ಹೆಸರಿನಲ್ಲಿ –ರಾಮಚಂದ್ರನ್– ಹೆಸರಿನಲ್ಲಿ ಪ್ರಯಾಣ ಮಾಡ್ತಿದಾನೆಂತ ತಿಳಿದಾಗ ಅವರು ಯಾವ ಟ್ರಾವಲ್ ಏಜೆಂಟು ಅಂತ ತಿಳಿದು ಕೊಂಡು ನೇರವಾಗಿ ನಿಮ್ಮನ್ನು ವಿಚಾರಿಸಲಿಕ್ಕೆ ನಿಮ್ಮ ಆಫೀಸಿಗೆ ಬರ್ತಾರೆ..'.

'ನನಗೆ ಅವನು ನಂಬರ್ ಕೊಟ್ಟೀದಾನೆ ಬೇಕಾದರೂ ಅವನಿಗೆ ಫೋನ್

ಮಾಡಬಹುದು' ಅಂದೆ.

ಇದು ತೋಳ ಕುರಿಮರಿ ಕಥೆಯಾಗಿ ತಿರುಗಿತು.

'ನೀವು ಫೋನ್ ಮಾಡದಿರುವುದೇ ಒಳ್ಳೇದು. ನಾಳೆ ಏನಾದರೂ ಪ್ರಾಬ್ಲಂ ಬಂದರೆ ನಿಮಗೂ ಅವನಿಗೂ ಮುಂಚೆಯೇ ಪರಿಚಯವಿತ್ತು ಎಂದಾಗುತ್ತೆ. ನೀವು ಅವನು ಪಾರ್ಟನರ್ಸ್ ಎಂದಾಗಬಹುದು'.

ನನ್ನ ಸ್ನೇಹಿತ  ಈ ಮಧ್ಯೆ ಕಾಫಿ ಮತ್ತು ಹುರಿಗಾಳು ತಂದಿಟ್ಟ. ಒಂದು ಗುಟುಕು ಕುಡಿದೆ. ಕಾಫಿ ವಿಷ ಕುಡಿದ ಹಾಗಿತ್ತು. ಹುರಿಗಾಳು ಬಾಯಿಗೆ ಹಾಕಿಕೊಂಡರೆ ಅದು ಗಂಟಲ್ಲೇ ಸಿಕ್ಕಿ ನಾನು ಉಸಿರಾಟವಿಲ್ಲದೆ ಸಾಯ್ತಿನಿ ಅಂತ ಅನ್ನಿಸ್ತು.

'ಆಥವಾ..  ಪೋಲಿಸರಿಗೆ ಗುಮಾನಿ ಬಂದಿರಬಹುದೆಂದು ಊಹಿಸಿ ನಾಳೆ ಅವನು ಬೊಂಬಾಯಿಯಲ್ಲಿ ಇಳಿದು ಲಗೇಜ್ ತೆಗೆದು ಕೊಳ್ಳದೇ ಹಾಗೇ ಹೋದ್ರೆ ಪೊಲೀಸ್ ಅದನ್ನು ಚೆಕ್ ಮಾಡ್ತಾರೆ.. ಅದರಲ್ಲಿ ಡ್ರಗ್ಸ್ ಏನಾದರೂ ಸಿಕ್ಕಿದರೆ.. ಅಥವ ಸೂಟ್ ಕೇಸಿನಲ್ಲಿ ಹಣವೋ ಏನಾದರೂ ಇದ್ದರೆ..  ರಾತ್ರೋರಾತ್ರಿ ನಿಮ್ಮ ಮನೆಗೋ ಅಥವ ಆಫೀಸಿಗೆ ಖಂಡಿತ ಬರ್ತಾರೆ..'.

ನನಗೆ ಯಾರೋ ಫಾಸಿಗೆ ಹಾಕಿದ್ದಾರೆ ಅಂತ ಅನ್ನಿಸ್ತು. ಏರ್ಪೋರ್ಟಿಗೆ ಹೋಗೋದೇ ಬೇಡ ಅಂತ ಅನ್ನಿಸ್ತು..  ನನ್ನ ಮೈಂಡ್ ರೀಡ್ ಮಾಡಿಯೋ ಏನೋ..' ನೀವು ಟ್ರಾವಲ್ ಪ್ಲಾನ್ ಬದಲಾಯಿಸಿದೀರೀಂತ ಅನುಮಾನ ಬಂದರೆ ನಿಮ್ಮನ್ನು ಟ್ರೈನ್ ಮತ್ತು ಎಸ್. ಟಿ. ಬಸ್ಸುಗಳಲ್ಲಿ ಹುಡುಕ್ತಾರೆ.' ನನ್ನ ಸ್ನೇಹಿತನೂ ನನ್ನ ಕಡೆ ನಾನು ಈಗ ಖೈದಿ ಅನ್ನುವ ಹಾಗೆ ನೋಡುತ್ತಿದ್ದ.

ಇಬ್ಬರ ಕತ್ತನ್ನೂ ಹಿಸುಕಿ ಗ್ರೀನ್ ಪಾರ್ಕ ಪೊಲಿಸ್ ಸ್ಟೇಷನ್ಗೆ ಹೋಗಿ ಸರೆಂಡರ್ ಆಗಿಬಿಡೊದೇ ಅಂತ ಮನಸ್ಸಿಗೆ ಬಂತು.

ಕೊನೆಗೆ ಒಂದು ಸಲಹೆ ಕೊಟ್ಟ ಸುರೇಶ.

'ನಾಳೆ ಬೆಳಿಗ್ಗೆ ಬೊಂಬಾಯಿಗೆ ಸೇರಿದ ತಕ್ಷಣ ಬ್ಯಾಂಕಿಗೆ ಹೋಗಿ ದುಡ್ಡು ಡ್ರಾ ಮಾಡಿ. ಒಂದೆರೆಡು ಟ್ರಾನ್ಸಾಕ್ಷನ್ ಮಾಡಿ. ನೀವು ಬೆಳಿಗ್ಗೇನೇ ಅಲ್ಲಿದ್ರೆ ಅಂತ ಒಂದು ಪ್ರೂಫ್ ಸಿಗುತ್ತೆ. ಮುಂದೆ ಏನಾದ್ರೂ ಆದ್ರೆ ಆ ಪ್ರೂಫ್ ಉಪಯೋಗಕ್ಕೆ ಬರುತ್ತೆ'.

ಇಂತಹ ಒಳ್ಳೆಯವನನ್ನು ಕೊಲ್ಲುವುದಕ್ಕೆ ಹೊರಟಿದ್ದೆನಲ್ಲ .. ಎಂದು ನನ್ನ ಬಗ್ಗೆ ನನಗೇ ನಾಚಿಕೆಯಯಿತು.

'ನೀವು ಇನ್ನು ಹೊರಡಿ.. ಫ್ಲೈಟ್ಗೆ ಟೈಮಾಯಿತು.. ಅದು ಮಿಸ್ ಆದ್ರೆ ಅದೂ ಒಂದು ರಾಮಾಯಣ ಆಗಬಹುದು.. ಯಾತಕ್ಕೆ ಇವನು ಮಿಸ್ ಮಾಡ್ದಾಂತ.... ನೀವು  ಹೊರಡಿ. ನೀನು ಇವರ ಜೊತೆ ಹೋಗಿ ಫ್ಲೈಟ್ ಹೊರಡುವ ತನಕ ಅಲ್ಲೇ ಇದ್ದು ಅದು ಹೊರಟ ಮೇಲೆ ಬಾ' ಅಂತ ನನ್ನ ಸ್ನೇಹಿತನನ್ನೂ ಕಳಿಸಿಕೊಟ್ಟ ' ಸುರೇಶ.

ನಾನು ಚೆಕಿನ್ ಆದಾಗ ಅಲ್ಲಿನ ಆಫಿಸರ್ ಬೋರ್ಡಿಂಗ್ ಪಾಸ್ ತೊಗೊಂಡು, 'ನೊ ಲಗೇಜ್  ಮಿಸ್ಟರ್ ಗಗ್ಲಾನಿ' ಎಂದು ನನ್ನ ಕಡೆ ನೋಡಿದ. ಒಂದು ಕ್ಷಣ ತಬ್ಬಿಬ್ಬಾದೆ, ಅದು ಅವನ ಹೆಸರು ಎಂದು ಜ್ಞಾಪಕಕ್ಕೆ ಬಂತು. ಸುಮ್ಮನೆ ತಲೆಯಾಡಿಸಿದೆ.

ನಾನು ಚೆಕಿನ್ ಆದ್ಮೇಲೆ ನನ್ನ ಸ್ನೇಹಿತ ಹೊರಗಡೆಯಿಂದ ಹೆಬ್ಬೆಟ್ಟು ಮೇಲೆ ತೋರಿಸಿ ಹೊರಟು ಹೋದ.

ನಾನು ಮುಖ ಮುಚ್ಚಿಕೊಂಡು ಪ್ಲೇನ್ ಯಾವಾಗ ಹೊರಡುತ್ತೋಂತ ಯೋಚಿಸ್ತಾ ಕೂತಿದ್ದೆ. ಸ್ವಲ್ಪ ಹೊತ್ತಾದಮೇಲೆ ಏರ್ ಹೋಸ್ಟೆಸ್ ದೂರದಿಂದ ನನ್ನ ಕಡೆ ನೋಡುತ್ತ ಹತ್ತಿರ ಬಂದು, 'ಯಸ್ ಸರ್ 'ಎಂದಳು. ಎಲ್ಲಾ ನನ್ನ ಕಡೆ ನೋಡುತ್ತಿರುವ ಹಾಗಿತ್ತು. ನನ್ನ ಜಂಘಾಬಲವೇ ಉಡುಗಿ ಹೋಯಿತು. 'ನಾನು ' ವಾಟ್'? ಅಂದೆ. 'ಯು ಹ್ಯಾವ್ ಪ್ರೆಸ್ಡ್ ಕಾಲ್ ಬಟನ್ ಸರ್... ಡು ಯು ವಾಂಟ್ ಸಂಥಿಂಗ್?' ಅಂದಳು. ನನಗೆ ಗೊತ್ತಿಲ್ಲದೆ ಬಟನ್ ಪ್ರೆಸ್ ಮಾಡಿದ್ದೆ. ' ನನ್ನ ಪರಿಸ್ಥಿತಿ ನೋಡಿ, 'ಐ ವಿಲ್ ಬ್ರಿಂಗ್ ಸಮ್ ವಾಟರ್ ಫರ್ ಯು'. ಎಂದು ಹೋದಳು.

ಬೊಂಬಾಯಿ ಏರ್‌ಪೋರ್ಟ್‌ನಿಂದ ಮನೆಗೆ ಸೇರಿದವನೇ ಒಳಗೆ ಆಂಜನೇಯನ ಪಟಕ್ಕೆ ನಮಸ್ಕಾರ ಮಾಡಿದೆ. ನನ್ನ ಅಣ್ಣ 'ನೀನು ನಾಳೆ ಬರಬೇಗಿತ್ತಲ್ವೇನೋ.. ಏನು ಇವತ್ತೇ ಬಂದೆ? ಅದಿರ್ಲಿ.. ನೀನು ಪ್ಲೇನಿನಲ್ಲಿ ಬಂದೆಯಾ.. ಇಲ್ಲ ಅದರ ಹಿಂದೆ ಓಡಿ ಬಂದೆಯಾ?! ನಿನ್ನ ಮುಖ ಹಾಗಿದೆ' ಎಂದ.

ನನ್ನ ಕೊಲೀಗ್ಗೆ ನಡೆದಿದ್ದೆಲ್ಲಾ ಹೇಳಿದೆ. ನಾಳೆ ಶನಿವಾರ ಆಫೀಸ್ ರಜ. ಬೆಳಿಗ್ಗೆ ಸಿಗ್ತೀನಿ ಅಂದ. ನಿನ್ನ ಪ್ರಾಬ್ಲಂ ಅರ್ಧ ಸಾಲ್ವ ಆಗಿದೆ. ಇಂಟರ್ವೆಲ್ ಆದ್ಮೇಲೆ ನಾಳೆ ಮಿಕ್ಕಿದ್ದು ಇದೆ ಎಂದು ನಗೆಯಾಡಿದ.

ರಾತ್ರಿಯೆಲ್ಲಾ ನಿದ್ದೆಯಿಲ್ಲ. ಬೆಳಗಿನ ಜಾವದಲ್ಲಿ ಕನಸಿನಲ್ಲಿ ನಮ್ಮ ಮನೆ ಸುತ್ತಾ ಸೈರೆನ್ ಹಾಕಿ ಪೊಲಿಸ್ ಜೀಪ್ ಓಡಾಡಿದ ಹಾಗೆ, ನನ್ನ ಸೂಟ್ಕೇಸಿನಿಂದ ಹೆಣದ ಕೈ ಹೊರಗೆ ಬಂದು ಕೈಯಾಡಿಸಿದ ಹಾಗೆ ಕನಸು.

ಬೆಳಿಗ್ಗೆ ಎದ್ದವನೇ ಬೇಗ ರೆಡಿಯಾಗಿ ಬ್ಯಾಂಕಿನ ಬಾಗಿಲ ಹತ್ತಿರ ನಿಂತೆ. ಗುಡಿಸುವವಳು ಬಂದು ಗುಡಿಸಿ ನನ್ನ ನೋಡಿ ಅಲ್ಲಿ ನಿಂತಿದ್ದ ಸೂಪರ್ ವೈಸರ್ ಕಿವಿಯಲ್ಲಿ ಏನೋ ಪಿಸುಗಿಟ್ಟಿದಳು.. ಅವನು ಇಲ್ಲಿ ನಿಂತ್ಕೋ ಬೇಡಿ.. ಬ್ಯಾಂಕು ತೆಗೆಯಲಿಕ್ಕೆ ಇನ್ನೂ ಒಂದು ಘಂಟೆ ಇದೆ ಅಂದ. ದೂರ ಹೋದಾಗ ಬೆಳಗ್ಗಿನ ಪೇಪರ್ ಫುಟ್ಪಾಥ್ನಲ್ಲಿ ಮಾರ್‍ತಿದ್ದ. ಅದನ್ನು ಕೊಂಡು ಮೊದಲ ಪುಟ ನೋಡುವಾಗಲೂ ನನಗೆ ಹೆದರಿಕೆ. ಎಲ್ಲಾ ಪೇಜಿನಲ್ಲೂ ಬೇಗ ಒಂದು ಕ್ಷಣ ಕಣ್ಣು ಹಾಯಿಸಿದೆ. ಎಲ್ಲಿಯೂ ಮರ್ಡರ್ ಚಿತ್ರವಿರಲಿಲ್ಲ.

ಬ್ಯಾಂಕ್ ತೆಗೆದಾಗ ಟೆಲ್ಲರ್ ನನ್ನ ನೋಡಿ ಹೇಗಿದೀರಿ ಸಾರ್ ಅಂದರು. ಅಷ್ಟರಲ್ಲಿ ನಾನು ಚಲಾನ್ ತುಂಬುತ್ತಿದ್ದೆ. ಹುಷಾರಿದೀರಾ ಮನೆಯಲ್ಲಿ ಎಲ್ಲಾ ಹುಷಾರಾಂತ ಕೇಳಿ ಹೋದರು. ದುಡ್ಡು ಡ್ರಾ ಮಾಡಿಬಂದೆ.

ಇನ್ನೊಂದು ಬ್ಯಾಂಕಿಗೆ ಹೋಗಿ ಅಲ್ಲಿ ಸ್ವಲ್ಪ ಹಾಕಿ ಎರಡು ವೈಚರ್ಗಳನ್ನು ಪರ್ಸಿನಲ್ಲಿಟ್ಟು, ಪಾಸ್ ಬುಕ್ಕಿನಲ್ಲೂ ಎಂಟರ್ ಮಾಡಿಸಿದ್ದಾಯಿತು.

ಮನೆಗೆ ಬಂದವನೇ ಮಲಗಿ ಬಿಟ್ಟೆ.

ಸಂಜೆಯಾಗುತ್ತಲೇ ಮತ್ತೆ ಎದೆ ಢವಢವ ಎಂದು ಹೊಡೆದು ಕೊಳ್ಳಲಾರಂಭಿಸಿತು. ನನ್ನ ಕೊಲಿಗ್ ಜೊತೆ ಸಾಂತಕ್ರೂಜಿನ ಏರ್ ಪೋರ್ಟಿಗೆ ಓಡಿದೆವು. ನಿನ್ನ ಜೊತೆ

ಹೋಗುವುದಕ್ಕೇ ನನಗೇ ಹೆದರಿಕೆ ಆಗ್ತಿದೆ... ಡೆಲ್ಲಿಯಲ್ಲಿ ಮರ್ಡರ್  ಏನಾದ್ರೂ ಮಾಡಿ ಬಂದಿದೀಯ ಎಂದು ಛೇಡಿಸಿದ. ಬಾಯಿ ಮುಚ್ಚಿಕೊಂಡಿದ್ದೆ.

ಆವತ್ತೇ ವೈಜಯಂತಿಮಾಲಾಳ ಡ್ಯಾನ್ಸ್ ಪ್ರೋಗ್ರಾಂ. ನಾನು ಸುಮಾರು ಜನಕ್ಕೆ ಟಿಕೆಟ್ ಮಾರಿದ್ದೆ. ಆವರೆಲ್ಲಾ ಬರುವಷ್ಟರಲ್ಲಿ ನಾವಿಬ್ಬರೂ ಏರ್ ಪೋರ್ಟಿಗೆ ಹೋದೆವು.

ಏರ್ಪೋರ್ಟಿನಲ್ಲಿ ಬಹಳ ಪೊಲಿಸ್ ನವರು ಓಡಾಡುತ್ತಿದ್ದರು. ಇಬ್ಬರಿಗೂ ಹೆದರಿಕೆ ಆಯಿತು. ಒಬ್ಬ ಪೊಲಿಸ್ನವನನ್ನು ಕೇಳಿದಾಗ ಮಹಾರಾಷ್ಟ್ರದ ಹೋಮ್ ಮಿನಿಷ್ಟರ್ ಆ ಫ್ಲೈಟಿನಿಂದ ಬರುತ್ತಿದ್ದರು. ಅದಕ್ಕೆ ಆ ತರಹದ ಬಂದೋಬಸ್ತ್ ಅಂತ ಗೊತ್ತಾಯಿತು.

ನಮ್ಮ ಪ್ಲೇನ್ ಡೆಲ್ಲಿಯಿಂದ ಬಂತು. ಪ್ಯಾಸೆಂಜರ್ಸ್ ಒಬ್ಬೊಬ್ಬರಾಗಿ ಇಳಿದು ಹೊರಗಡೆ ಬಂದರು. ನಿನ್ನ ಗಿರಾಕಿ ಬಂದನಾಂತ ಕೇಳಿದ ಕೊಲೀಗ್. ಅವನ್ನ ನೋಡಿದ್ದೆ ಎರಡು ಮೂರು ನಿಮಿಶ. ಹೇಗೆ ಗುರ್ತು ಹಿಡಿಯುವುದು?  ಒಳಗೆ ಹೋಗಿ ಪ್ಯಾಸೆಂಜರ್ ಕೇಳಿದೆವು. ಅದರಲ್ಲಿ ನನ್ನ ಹೆಸರಿತ್ತು! ಲಗೇಜು ಏನಾದರೂ ಇದೆಯಾ ಎಂದು ಕೇಳಿದಾಗ, ನೊ ಬ್ಯಾಗೇಜ್ ಅಂದ್ರು!


ನಾನು ಷಣ್ಮುಖಾನಂದ ಹಾಲಿನಲ್ಲಿ ನಡೆಯುತ್ತಿರುವ ಡ್ಯಾನ್ಸಿಗೆ ಹೋಗಿ  ಮೊದಲ ನಿಟ್ಟಿಸುರು ಬಿಟ್ಟೆ!

ನನಗೆ ಮುಂದೆರೆಡು ದಿನ ಯಾವ ಫೋನ್ ಬಂದರೂ ಹೆದರಿಕೆ ಆಗುತ್ತಿತ್ತು. ಕ್ರಮೇಣ ಎಲ್ಲಾ ಮರೆತುಹೋಯಿತು.

ಆದರೆ ಆ ಒಂದು ಮದ್ಯಾಹ್ನದ  'ಥರ್ಡ ಡಿಗ್ರೀ ಟಾರ್ಚರ್' ಸುರೇಶನ ಜೊತೆ ಇಂದಿಗೂ ಜ್ಞಾಪಕವಿದೆ!

■

---





" ಈ ಲಾಕ್‌ಡೌನಿಂದ಼್ಲೇ ನಾವಿಬ್ರೂ ಒಟ್ಗೇ ಇರೋದು ಅನ್ಸುತ್ತೆ ನನಗೆ "

# ಆರ್.ಕೆ.ಲಕ್ಷ್ಮಣ್
# ಶತಮಾನೋತ್ಸವ

ಕೊರವಂಜಿಯ ಪ್ರಾರಂಭದ ದಿನಗಳಲ್ಲಿ ಲಕ್ಷ್ಮಣ್ ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದರು. ನಾ. ಕಸ್ತೂರಿಯವರಿಂದ ಪ್ರಭಾವಿತರಾಗಿ ಲಕ್ಷ್ಮಣ್ ಕೊರವಂಜಿಗೆ ವ್ಯಂಗ್ಯ ಚಿತ್ರಗಳನ್ನು ಬರೆಯಲು ಪ್ರಾರಂಭಿಸಿದರು. ಲಕ್ಷ್ಮಣ್ ಹುಟ್ಟಿದ್ದು ಅಕ್ಟೋಬರ್ 24 1921ರಲ್ಲಿ. ಐವತ್ತರ ದಶಕದಲ್ಲಿ ಲಕ್ಷ್ಮಣ್ ಟೈಮ್ಸ್ ಆಫ್ ಇಂಡಿಯಾ ಸಮೂಹವನ್ನು ಸೇರಿದರು. ಅವರು ಆಗ ಸೃಷ್ಟಿಸಿದ "ದ ಕಾಮನ್ ಮ್ಯಾನ್" ಪಾತ್ರ ಇಂದಿಗೂ ಜನಮಾನಸದಲ್ಲಿ ಚಿರಸ್ಥಾಯಿಯಾಗಿ ನಿಂತಿದೆ. ಜನವರಿ 2016ರಲ್ಲಿ ಬೆಂಗಳೂರಿನ ಕಾರ್ಟೂನಿಸ್ಟ್ಸ್ ಅಸೋಸಿಯೇಷನ್ ವತಿಯಿಂದ ಲಕ್ಷ್ಮಣ್ ಕೊರವಂಜಿಗೆ ರಚಿಸಿದ್ದ ವ್ಯಂಗ್ಯಚಿತ್ರಗಳ ಮೂಲ ನಕ್ಷೆಗಳ ಪ್ರದರ್ಶನವೊಂದನ್ನು ಏರ್ಪಡಿಸಿದ್ದೆವು. ಲಕ್ಷ್ಮಣ್‌ರ ಸೊಸೆ ಉಷಾ ಲಕ್ಷ್ಮಣ್ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಬಂದಿದ್ದರು. ಮುಂಬಯಿಯಲ್ಲಿ ಲಕ್ಷ್ಮಣ್‌ರವರ ವ್ಯಂಗ್ಯಚಿತ್ರಗಳ ಒಂದು ಶಾಶ್ವತ ಪ್ರದರ್ಶನ ಶಾಲೆಯನ್ನು ನಿರ್ಮಿಸುವ ಯೋಜನೆಯನ್ನು ಉಷಾರವರು ನಮ್ಮೊಂದಿಗೆ ಹಂಚಿಕೊಂಡನಂತರ ನಮ್ಮಲ್ಲಿದ್ದ ಲಕ್ಷ್ಮಣ್ ರಚಿಸಿದ್ದ ಎಲ್ಲಾ ಮೂಲ ಚಿತ್ರಗಳನ್ನು ಈ ಪ್ರಯತ್ನಕ್ಕೆ ನಮ್ಮ ಕೊಡುಗೆಯಾಗಿ ನೀಡಿದೆವು. ವ್ಯಂಗ್ಯ ಚಿತ್ರಗಳ ಜಗತ್ತಿನಲ್ಲಿ ಲಕ್ಷ್ಮಣ್‌ರ ಹೆಸರು ಎಂದೆಂದಿಗೂ ನಿಲ್ಲವಂತಹದು.

ಲಕ್ಷ್ಮಣ್‌ರ ಹಲವು ವ್ಯಂಗ್ಯಚಿತ್ರಗಳನ್ನು ಇಲ್ಲಿ ನೀಡಿದ್ದೇವೆ.



ಸಿನಿಮಾ ಮ್ಯಾನೇಜರ್ :
ಈವತ್ತು ಕಲೆಕ್ಷ್ಣ ವಾಶಿ.



“ನಾನು ಹೇಳಿದಹಾಗೆ ಕಿಟಕಿಗಳನ್ನೆಲ್ಲಾ ತೆರೆದಿಟ್ಟು ಮಲಗಿಕೊಂಡೆಯಾ ನೆನ್ನೆ ರಾತ್ರಿ ?”

“ಹೂಂ”

“ಹಾಗಾದರೆ ಈಗ ಆ ತಲೆಯನೋವು ಮಾಯವಾಗಿರಬೇಕಲ್ಲಾ”

“ಆಗಿದೆ ಸಾರ್ ; ತಲೆಯನೋವಿನ ಜೊತೆಗೆ ನನ್ನ ಕನ್ನಡಕ, ಗಡಿಯಾರ ಪರ್ಸು ಎಲ್ಲಾ ಮಾಯವಾಗಿದೆ”



“ನಾನೇನ್ಮಾಡ್ಲಿ ತಾಯಿ! ಅವ್ರೆ ಹೆದರ್ಕೊಂಡು ಅಳ್ತಿದಾರೆ”.

# ವಾಪಾಸ್ ಕೊಟ್ಟು ದುಡ್ಡು ಇಸ್ಕೊಂಡ್ ಬಾ...

**●ಎಚ್. ಗೋಪಾಲಕೃಷ್ಣ**

ಬೊಮ್ಮಾಯಿ ಸಾಹೇಬರು ಹೆಂಡತಿಗೆ ಸೀರೆ ಅಂಗಡಿಯಲ್ಲಿ ತಾವೇ ಸೀರೆ ಕೊಂಡರಂತೆ. ಸುದ್ದಿ ಓದುತ್ತಿದ್ದ ಹಾಗೇ ಬೊಮ್ಮಾಯಿ ಅವರ ಮೇಲೆ ಅನುಕಂಪದ ಅಲೆ ಹರೀತು. ನಾನು ನನ್ನಾಕೆಗೆ ಸೀರೆ ಖರೀದಿ ಮಾಡಿದ ಮೊದಲ ಹಾಗೂ ಕೊನೆಯ ಒಂದೇ ಒಂದು ಅನುಭವ ನೆಪ್ಪಾತು.

ಮಲ್ಲೇಶ್ವರದ ಸಂಪಿಗೆ ರಸ್ತೇಲಿ ಹೋಗ್ತಾ ಇದ್ದೆ. ಎದುರಿಂದ ಬಂದ ಕುಳ್ಳಗಿನ ಒಬ್ಬರು ನನ್ನನ್ನು ಎರಡು ಕ್ಷಣ ನೋಡಿದರು.

ಏಯ್ ನಿಂತ್ಕೋ... ಅಂದರು.

ಆರೂವರೆ ಅಡಿ ಎತ್ತರ, ನೂರಾವೈತ್ತು ಕೆಜಿ ತೂಕದ ಮನುಷ್ಯನನ್ನು ಒಬ್ಬ ಛೋಟಾ ಆದ್ಮಿ ಏಯ್ ಅನ್ನೋದೂ ಅಲ್ಲದೇ ನಿಂತ್ಕೋ ಅಂತ ಏಕವಚನದಲ್ಲಿ ಹೇಳಿದರೆ ಏನಾಗಬೇಕು?

ಅದೇ ಆಗಿದ್ದು. ಏನೋ ಬಚ್ಚಾ ಯಾರೋ ನೀನು? ಇಷ್ಟುದ್ದ ಇದೀಯ, ನನಗೇ ನಿಂತ್ಕೋ ಅಂತಿಯ ಅಂತ ರೇಗಿದೆ.

ಕುಳ್ಳು ನಗ್ತು. ನೀನು ಗೋಪಿ ತಾನೇ, ವಿವೇಕ ವರ್ಧಿನಿ ಸ್ಕೂಲು ತಾನೇ..... ಅಂತ ಕೇಳ್ತಾ ಕೈ ಹಿಡಿದುಕೊಳ್ತು.

ಯಾರೋ ನನಗೆ ಗೊತ್ತಿರೋನು, ಹದಿನೈದು ಇಪ್ಪತ್ತು ವರ್ಷ ಹಿಂದೆ ನನ್ನ ಜತೆ ಹೈಸ್ಕೂಲು ಕಲಿತೋನು ಇರಬೇಕು ಅನ್ನಿಸಿತು. ಪಕ್ಕದಲ್ಲಿ ಸರಿದು ನಿಂತೆವು. ಕುಮಾರ ಸ್ವಾಮಿ ಅವನ ಹೆಸರು, ನಾನು ಇಪ್ಪತ್ತು ವರ್ಷದ ಕತೆ ಹಂಚಿಕೊಂಡೆವು, ಆವಾಗ ನಮ್ಮ ಜತೆ ಓದುತ್ತಾ ಇದ್ದ ಶಶಿಕಲಾ, ಶ್ರೀದೇವಿ, ಸರಳಕುಮರಿ, ಶೈಲಜಾ, ವೆಂಕಟಲಕ್ಷ್ಮಿ, ಸರಸು.... ಇವರನ್ನೆಲ್ಲಾ ನೆನೆಸಿಕೊಂಡು ಜೊಲ್ಲು ಸುರಿಸಿದ ಕೆಲಸವೂ ಆಯ್ತು.

ಅವನು ಅವನ ಸಂಸಾರದ ಕತೆ ಹೇಳಿದ, ನಾನೂ ನನ್ನದನ್ನು ಹೇಳಿದೆ.

ಸೀರೆ ಅಂಗಡಿ ಇದೆ ನಮ್ಮದೇ. ಬಾ, ನಿನ್ನಾಕೆಗೆ ಸೀರೆ ತಗೋ ಅಂದ. ಅವನ ಹಿಂದೆ ಅವನ ಅಂಗಡಿಗೆ ಹೋದೆ. ಸೆಲೆಕ್ಟ್ ಮಾಡು ಅಂದ. ಸೆಲೆಕ್ಟ್ ಮಾಡಿದೆ. ತುಂಬಾ ಚೆನ್ನಾಗಿದೆ, ನಿನ್ನ ಸೆಲೆಕ್ಷನ್... ಅಂತ ಹೊಗಳಿದ. ಡಿಸ್ಕೌಂಟ್ ರೇಟ್ ಹಾಕ್ತೀನಿ ಅಂತ ಬೆಲೆ ಕಡಿಮೆ ಮಾಡಿ ಕವರ್‌ನಲ್ಲಿ ಹಾಕಿ ಕೊಟ್ಟ.

ಖುಷಿಯಿಂದ ಮನೆಗೆ ತಂದು ಹೆಂಡತಿ ಎದುರಿಗೆ ಸೀರೆ ಇಟ್ಟರೆ ಅವಳು ಮಹಾಕಾಳಿ ಆಗಿಬಿಡಬೇಕೆ?

ನಿಂಗ್ಯಾವೋಳು ಸೀರೆ ತಗೊಂಡು ಬಾ ಅಂತ ಹೇಳಿದ್ದು?

ಅದೇನು ತರುಕ್ಕೆ ಬರುತ್ತೆ ಅಂತ ತಂದೆ?

ಪಕ್ಕದ ಅಂಗಡಿಗೆ ಹೋಗಿ ಕೊತ್ತಂಬಿಸೊಪ್ಪು ತರೋಕ್ಕೆ ಸರಿಯಾಗಿ ಬರೂಲ್ಲ ನಿನಗೆ?

ಸೀರೆ ಬೇರೆ ತಂದ್ಯಾ......

ಮೊದಲಾದ ಉಪದೇಶ ಎರಡು ದಿವಸ ನಡೆದು ಹೋಗಿ ಸೀರೆ ವಾಪಾಸ್ ಕೊಟ್ಟು ದುಡ್ಡು ಇಸ್ಕೊಂಡ್ ಬಾ.. ಅಂತ ಆರ್ಡರ್ ಆಯ್ತು.


ಕುಮಾರಸ್ವಾಮಿ ಅಂಗಡಿಗೆ ಹೋಗಿ ಸೀರೆ ವಾಪಾಸ್ ಕೊಟ್ನೋ ಇಲ್ವೋ ನೆಪ್ಪಿಲ್ಲ. ಆದರೆ ಅವತ್ತಿಂದ ನನ್ನ ಹೆಂಡತಿಗೆ ಸೀರೆ ತರುವ ಕಾಯಕಕ್ಕೆ ಕೈ ಹಾಕಿಲ್ಲ....

ಪಾಪ ಬೊಮ್ಮಾಯಿ ಸಾಹೇಬರು ಅಂಗಡಿಗೆ ಮತ್ತೆ ಕತ್ತಲಲ್ಲಿ ವೇಷ ಮರೆಸಿಕೊಂಡು ಬಂದು ಸೀರೆ ವಾಪಾಸ್ ಕೊಟ್ಟು ದುಡ್ಡು ಇಸ್ಕೊಳ್ಳೋದನ್ನ ನೆನೆಸಿದರೆ.....

ಅಯ್ಯೋ ಅನ್ಸುತ್ತೆ!

■

---



" ದೇವ್ರಿಲ್ಲ, ದೇವ್ರಿಲ್ಲ , ಅಂತ ಹೇಳ್ತೀಯಲ್ಲಾ, ಪ್ರತಿ ವಾರ
ನಮ್ಮ ನೀರನ್ನ ಬದಲಾಯಿಸೋರು ಯಾರು ಅಂದ್ಕೊಂಡಿದೀಯ ? "

(ಎರಡು ದಶಕಗಳ ಹಿಂದೆ ಅಪರಂಜಿ)

ಸುದ್ದಿ ಸ್ವಾರಸ್ಯ – ನಾಸ್ಟಾಲ್ಜಿಯ

# ಸಂಡೇ ಕಿ ಸಂಡೇ

●ಭಕ್ತ

ಮನಸ್ಸಿನ ನೆಮ್ಮದಿಯನ್ನು ಕಲಕಿ, ಕದಡಿಬಿಡುವ ಹಲವು ಘಟನೆ, ನೆನಪುಗಳು ಎಲ್ಲರ ಅನುಭವಕ್ಕೆ ಬಂದದ್ದೇ. ವಯಸ್ಸಾಗುತ್ತಾ ಬಂದಂತೆ ಈ ನೆನಪುಗಳ ಸಂಖ್ಯೆಯೂ ಹೆಚ್ಚುತ್ತಿದೆಯೇನೋ ಅನ್ನಿಸುತ್ತಿದೆ ನನಗೆ.

ಹಿಂದೊಮ್ಮೆ ನಮ್ಮಪ್ಪ ತನ್ನ ವಾಣಿಜ್ಯ ವ್ಯವಹಾರಾನ ನನ್ನ ಮೇಲೆ ಹೇರಿ, ಹೀಗೆ ಮಾಡು ಹಾಗೆ ಮಾಡು ಅಂತ ಫೋನಿನಲ್ಲೇ ಆಜ್ಞೆ ಕೊಡುಕ್ಕೆ ಪ್ರಾರಂಭಿಸಿದಾಗ ನಾನು ಸಹನೆ ಕಳೆದುಕೊಂಡು ಅವನೊಂದಿಗೆ ಬಹು ನಿಷ್ಠುರವಾಗಿ ಮಾತನಾಡಿದ್ದೆ. ಅಂದು ಅವನು ನನ್ನೊಂದಿಗೆ ಮರುಮಾತಾಡಿರಲಿಲ್ಲ. ನನ್ನೊಂದಿಗಿರಲಿ, ಬೇರೆ ಯಾರೊಂದಿಗೂ ಅವನು ಆ ಕುರಿತು ಪ್ರಸ್ತಾಪ ಮಾಡಲಿಲ್ಲ. ಆದರೂ ಆ ಘಟನೆಯನ್ನು ನಮ್ಮಪ್ಪ ಕೊನೆಯವರೆಗೂ ತನ್ನ ಹೃದಯಲ್ಲೇ ಬಚ್ಚಿಟ್ಟುಕೊಂಡಿರಬಹುದೆಂದು ನನಗೆ ಅನ್ನಿಸುತ್ತದೆ. ಇಂದಿಗೂ ಅದೊಂದು ಕಹಿ ನೆನಪು.

ಇನ್ನೊಮ್ಮೆ ನನ್ನ ಮಗ (ಅವನು ಆಗ ಐದು ವರ್ಷದ ಮಗು) ನನ್ನ ಟ್ರಾನ್ಸಿಸ್ಟರ್ ರೇಡಿಯೋವನ್ನು ಒಡೆದುಹಾಕಿದಾಗ ನಾನು ಕೋಪದಿಂದ ಅವನ ಕಪಾಳಕ್ಕೆ ಎರಡು ಬಿಗಿದಿದ್ದೆ. ಗೋಲಿಗೂ, ಟ್ರಾನ್ಸಿಸ್ಟರಿಗೂ ಇರುವ ಪ್ರಭೇದ, ಪಾಪ ಆ ಮಗುವಿಗೆ ಹೇಗೆ ತಿಳಿಯಬೇಕು. ಇಂದಿಗೂ, ಅಂದು ಏಟು ಹೊಡೆದಾಗ ಆ ಮಗುವಿನ ಕಣ್ಣುಗಳಲ್ಲಿ ನಾನು ಕಂಡ ಷಾಕ್, ನನ್ನ ನೆನಪಿಗೆ ನಿಚ್ಚಳವಾಗಿ ಮರುಕಳಿಸಿ, ಕಣ್ಣುಗಳು ಒದ್ದೆಯಾಗುತ್ತವೆ.

ಇವೆರಡು ಮಾಯದ ಗಾಯಗಳಿಗೆ ಹೋಲಿಸಿದರೆ, ನನ್ನ ಇತರ ಕಹಿ ನೆನಪುಗಳು ಅಷ್ಟೇನೂ ತೀವ್ರ ಅನುಭವಗಳಲ್ಲ. ಹಲವಕ್ಕೆ ನಾನು ಸೂಕ್ತ ಪ್ರಾಯಶ್ಚಿತ್ತವನ್ನೂ ಸಹಾ ಮಾಡಿಕೊಂಡಿದ್ದೇನೆ. ಆದರೂ ಮಾಡಿದ ತಪ್ಪನ್ನು ತಿದ್ದಿಕೊಳ್ಳುವವರೆಗೂ ನನ್ನ ಮನಃಸ್ಥಿತಿ ಅಷ್ಟೇನೂ ಹಿತಕರವಾಗಿಲಿಲ್ಲ ಎಂದು ಧಾರಾಳವಾಗಿ ಹೇಳಬಹುದು. ಇಂತಹ ಘಟನಾವಳಿಗಳಲ್ಲಿ ಅತ್ಯಂತ ಪ್ರಮುಖ ಘಟನೆ 1948ನೇ ಇಸವಿಯ ಅಕ್ಟೋಬರ್ ಹದಿನೆಂಟರಂದು ನಡೆದುಹೋಯಿತು. ಆ ದಿನ ಚಾರಿತ್ರಿಕವಾಗಿಯೂ ಮುಖ್ಯವಾದ ದಿನವಾಗಿದ್ದರಿಂದ ಅದನ್ನು ಮರೆಯುವಂತೆಯೇ ಇಲ್ಲ.

ಆಗ ನನಗೆ ಹದಿಮೂರು ವರ್ಷ. ಶಿವಮೊಗ್ಗೆಯ ಕನ್ನಡ ಪ್ರೌಢಶಾಲೆಯಲ್ಲಿ ನನ್ನ ಓದು. ಆಧುನಿಕ ವಿಜ್ಞಾನದ ಪರಿಚಯ ನಮಗೆ "ರಸಾಯನಿಕ ಶಾಸ್ತ್ರ", "ಭೌತಶಾಸ್ತ್ರ"ಗಳ ಮೂಲಕವೇ ಆಗುತ್ತಿತ್ತು. ಶಾಲೆಯನ್ನು ಯಾವುದೋ ಬಾಡಿಗೆ ಜಾಗದಲ್ಲಿ ನಡೆಸುತ್ತಿದ್ದರು. ನಮ್ಮ ಹೆಡ್ಮಾಸ್ಟರು ವಿಶ್ವೇಶ್ವರಯ್ಯನವರ ಕ್ಲೋನ್. ಮುಖವನ್ನೆಲ್ಲಾ ಕನ್ನಡಕ, ಪೇಟಗಳೇ ಆವರಿಸಿಕೊಂಡಿದ್ದವು. ಹೇಳಿಕೊಳ್ಳುವಂತಹ

ದೇಹವೇನೂ ಇಲ್ಲದ್ದರಿಂದ ಸ್ಕೂಲಿನಲ್ಲೆಲ್ಲಾ ತಲೆಯ ಓಡಾಟವೇ ಎದ್ದು ಕಾಣುತ್ತಿತ್ತು.

ನಮ್ಮ ಸ್ಕೂಲಿನ ವಾರ್ಷಿಕೋತ್ಸವವನ್ನು ನಡೆಸಲು ಆಗತಾನೇ ಹೊಸದಾಗಿ ಕಟ್ಟಿದ್ದ 80 ಅಡಿ, 40 ಅಡಿಗಳ ಭವ್ಯ ಕಟ್ಟಡ "ಕರ್ನಾಟಕ ಭವನ"ವನ್ನು ಆರಿಸಿಕೊಂಡಿದ್ದರು. ಆ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ನಮ್ಮ ಶಿವಮೊಗ್ಗೆಯವರೇ ಆದ ಲೋಕಸಭೆಯ ಡೆಪ್ಯುಟಿ ಸ್ಪೀಕರ್ ಅವರು ಬಂದಿದ್ದರು.

ವಾರ್ಷಿಕೋತ್ಸವ, ಎಲ್ಲಾ ಸ್ಕೂಲ್ ಸಮಾರಂಭಗಳಂತೆ, ಅದ್ದೂರಿಯಾಗಿಯೇ ಪ್ರಾರಂಭವಾಯಿತು. ಅಪಸ್ವರದ "ವಂದೇ ಮಾತರಂ" ಅರೆ ಬತ್ತಲೆಯ ಭಾರತ ಮಾತೆ, ಗುಂಡು ಗುಂಡಗಿನ ಮಹಾತ್ಮ ಗಾಂಧಿ, ಮುಖಕ್ಕೆ ಸುಣ್ಣ ಬಳಿದುಕೊಂಡ ಚಿಣ್ಣರು ತ್ರಿಶೂಲ ಕಂಡೊಡನೆ ಓಡಿಹೋಗುವ ದೃಶ್ಯ ಇವೆಲ್ಲಕ್ಕೂ ಧಾರಾಳವಾಗಿ ಚಪ್ಪಾಳೆ, ಒನ್ಸ್‌ಮೋರ್‌ಗಳು ದೊರಕಿದವು.

ಇವೆಲ್ಲ ಮುಗಿದ ನಂತರ ನನ್ನ ಪ್ರದರ್ಶನ.

ನಾನು ಆ ಸಂಜೆಯ ಮಹತ್ವದಿಂದ ಪ್ರಭಾವಿತನಾಗಿ ಆಶುಪ್ರದರ್ಶನ ಕೊಟ್ಟೆನೋ ಅಥವಾ ಮೊದಲೇ ಯೋಜಿಸಿ, ತಯಾರು ನಡೆಸಿ ವೇದಿಕೆಗೆ ಬಂದೆನೋ ಈಗ ಮರೆತುಹೋಗಿದೆ. ಬಹುಶಃ ಆ ಕಾರ್ಯಕ್ರಮ ಪೂರ್ವ ಯೋಜಿತವಾದದ್ದೇ ಇರಬೇಕು. ಏಕೆಂದರೆ ನಾನು ಅಂದು ಒಂದು ಟಾಪ್ ಹ್ಯಾಟ್ ಧರಿಸಿ, ಕೈಯ್ಯಲ್ಲಿ ವಾಕಿಂಗ್ ಸ್ಟಿಕ್ ಹಿಡಿದು ಬಂದಿದ್ದೆ.

ಇನ್ನು ನನ್ನ ಪ್ರದರ್ಶನದ ಘನ ಉದ್ದೇಶದ ಬಗ್ಗೆ ಹೇಳಬೇಕಾದರೆ, ಖಂಡಿತ ಅದರ ಹಿನ್ನೆಲೆಯಲ್ಲಿ ಒಂದು ನಿರ್ದಿಷ್ಟ ಫಿಲಾಸಫಿಯೇನೂ ಇದ್ದಿರಲಿಲ್ಲ. ಆ ಮುಂಚೆ ನಡೆದ ಪ್ರದರ್ಶನಗಳ ಕಳಪೆ ಮಟ್ಟ ಸಹಾ ನನ್ನ ಉದ್ದೇಶದ ಮೇಲೆ ಯಾವ ಪರಿಣಾಮವನ್ನೂ ಬೀರಿರಲಿಲ್ಲ. ಮುಖ್ಯವಾಗಿ ಸಿನಿಮಾದಿಂದ, ಅದರಲ್ಲೂ ರಾಮಚಂದ್ರರ ಸಂಗೀತದಿಂದ ನಾನು ಪ್ರಭಾವಿತನಾಗಿದ್ದೆ.

"ಷೆಹ್ನಾಯ್" 1947ರಲ್ಲಿ ಬಿಡುಗಡೆಯಾಗಿತ್ತು. 1948ರ ಆದಿಭಾಗದಲ್ಲಿ ಆ ಚಿತ್ರ ಶಿವಮೊಗ್ಗೆಗೆ ಬಂದಿತ್ತೆಂದು ಕಾಣುತ್ತದೆ. ಇಲ್ಲವಾದರೆ, ಆ ಸಂಜೆ, ಮುಖಕ್ಕೆ ಪೌಡರ್ ಬಳಿದುಕೊಂಡು, ಟಾಪ್ ಹ್ಯಾಟ್ ಧರಿಸಿ, ಕೈಯಲ್ಲಿ ವಾಕಿಂಗ್ ಸ್ಟಿಕ್ ಹಿಡಿದು. "ಆನಾ ಮೇರೆ ಜಾನ್ ಸಂಡೇ ಕಿ ಸಂಡೇ" ಎಂದು ಹಾಡುತ್ತಾ ನಾನು ವೇದಿಕೆಯ ಮೇಲೆ ಪ್ರವೇಶಿಸುವುದಕ್ಕೆ ಕಾರಣವಾದರೂ ಏನಿದ್ದೀತು? ನಾನು ಅಂದು ಕಾಲುಗಳನ್ನು ಝಾಡಿಸಿ, ವೇದಿಕೆಯ ಮೇಲೆಲ್ಲಾ ಓಡಾಡಿ ರಂಪ ಎಬ್ಬಿಸಿರಬೇಕೆಂದು ಕಾಣುತ್ತದೆ. ಇವತ್ತಿಗೂ ಕೇಳಿಸಿಕೊಂಡರೆ ನಾಚಿಕೆಯಾಗುವಂತಹ ಹಾಡು ಅದು. ಮೊದಲೇ ಕೆಟ್ಟ ಸಾಹಿತ್ಯ, ಅದರ ಮೇಲೆ ತೀರಾ ಕಳಪೆ ಸಂಗೀತ. ಎಲ್ಲಕ್ಕಿಂತ ಹೆಚ್ಚಾಗಿ ನಲವತ್ತರ ದಶಕದ ಸ್ವಾತಂತ್ರ್ಯ ಹೋರಾಟದ ಬಿಸಿ ತಟ್ಟಿದ್ದ ಶಿವಮೊಗ್ಗೆಯಲ್ಲಿ ನನ್ನ ಆ ಹಾಡು, ಊಟದ ಥಾಲಿಯಲ್ಲಿ ಬೀಫ್ ಬಡಿಸಿದಂತಿತ್ತು.

ನಾನಂತೂ ಬಹು ಉತ್ಸಾಹದಿಂದ ವೇದಿಕೆಯ ಮೇಲೆ ನನ್ನ ಹಾಡನ್ನು "ಹಾಡು"ತ್ತಿದ್ದೆ. ಮುಜುಗರದ ಮೌನ ಸಭೆಯನ್ನು ಆವರಿಸಿತ್ತು. ಕೆಲವರಂತೂ ವೇದಿಕೆಯ ಮೇಲೆ ಏನೂ ಆಗುತ್ತಿಲ್ಲವೆಂಬಂತೆ ನಟಿಸುತ್ತಾ ತಮ್ಮ ತಮ್ಮಲ್ಲೇ

ಮಾತುಕತೆ ಆರಂಭಿಸಿದ್ದರು. ಡೆಪ್ಯುಟಿ ಸ್ಪೀಕರ್ ಅವರನ್ನು ಮಾತಿಗೆಳೆಯಲು ನಮ್ಮ ಹೆಡ್ಮಾಸ್ಟರ್ ಭಗೀರಥ ಪ್ರಯತ್ನ ನಡೆಸುತ್ತಿದ್ದುದು ನನಗೆ ವೇದಿಕೆಯ ಮೇಲಿನಿಂದಲೇ ಕಂಡಿತು. ಮಕ್ಕಳು ಕಿರಿಚಾಡಲು ತೊಡಗಿದವು. ಸೈಡ್ ವಿಂಗ್‌ಗಳಲ್ಲಿ ಬಿರುಸಿನ ಚಟುವಟಿಕೆ ಕಾಣಿಸಿತು. ಯಾರೋ ಹಲವರು ಕರ್ಟನ್‌ಗಳನ್ನು ಕೆಳಗಿಳಿಸಲು ನೋಡಿದರು. ಕೆಳಗಿಳಿಸಬೇಕಾದ ಸಮಯದಲ್ಲೇ ಕೈ ಕೊಡುವ ಕರ್ಟನ್ ಹಗ್ಗಗಳು ಈಗ ಜಗ್ಗಿದರೆ ಮಣಿಯುತ್ತವೆಯೇ. ನನ್ನ ಹಾಡು ನಿರ್ವಿಘ್ನವಾಗಿ ಸಾಗಿತು.

ಕೊನೆಗೆ ನನ್ನ ಪ್ರದರ್ಶನ ಮುಗಿದಾಗ ಸಭೆಯಲ್ಲಿ ಸ್ಮಶಾನ ಮೌನ. ಮುಂದಿನ ಕಾರ್ಯಕ್ರಮ ನಡೆಸಲು ಯಾರೂ ಮುಂದೆ ಬರಲಿಲ್ಲ. ಅದೂ ಸಹಜವೇ ಅನ್ನಿ. ನನ್ನ ಪ್ರತಾಪದ ಪ್ರದರ್ಶನದ ನಂತರ ಯಾವ ಲಂಗ ಜಂಪರ್ ಹುಡುಗಿ ತಾನೇ "ಕೃಷ್ಣಾ ನೀ ಬೇಗನೆ ಬಾರೋ" ಹಾಡಲು ಧೈರ್ಯ ಮಾಡಿಯಾಳು.

ನನ್ನ ಏಕೈಕ ಪ್ರದರ್ಶನ ಸಭೆಯ ಮಿಕ್ಕ ಇನ್ನೆಲ್ಲ ಕಲಾಪಗಳನ್ನು ನಿಲ್ಲಿಸುವ ಯತ್ನದಲ್ಲಿ ಯಶಸ್ವಿಯಾಯಿತು. ನನ್ನ ಮೆಚ್ಚಿನ ಹೆಡ್ಮಾಸ್ಟರ್, ಮುಖ್ಯ ಅತಿಥಿಗಳನ್ನು ಸಮಾಧಾನ ಮಾಡಲು ವ್ಯರ್ಥ ಯತ್ನ ನಡೆಸಿದ್ದರು. ಅತಿಥಿಗಳಿಗೆ ನಿಜಕ್ಕೂ ಕೋಪ ಬಂದಿರಬೇಕು. ಹೇಳಿ ಕೇಳಿ ಸ್ವಾತಂತ್ರ್ಯ ಸೇನಾನಿ. ಭಾಷಣ ಮಾಡದೇ ಅವರು ಹೊರಟು ಹೋದರು. ಹೆಡ್ಮಾಸ್ಟರ್ ವಿಮನಸ್ಕರಾಗಿ ತಮ್ಮ ಜಾಗಕ್ಕೆ ಬಂದರು. ನನ್ನ ಹಲವು ಹಿತೈಷಿಗಳು ಅವರನ್ನು ಸಮಾಧಾನ ಮಾಡಲು ಯತ್ನಿಸಿದರು. "ಪಾಪ, ಹುಡುಗ ತಿಳೀದು" ಎಂದು ಕೆಲವರು ಹೇಳಿದರೆ ನಮ್ಮ ಕ್ಲಾಸ್ ಮಾನಿಟರ್ ನನ್ನನ್ನು ಗೋಡ್ಸೆಗೆ ಹೋಲಿಸಿ ಗಾಂಧಿ ಗೋಡ್ಸೆಯನ್ನು ಕ್ಷಮಿಸಿದಂತೆ ಹೆಡ್ಮಾಸ್ಟರ್ ನನ್ನನ್ನು ಕ್ಷಮಿಸುವಂತೆ ಬೇಡಿಕೊಳ್ಳುತ್ತಿದ್ದ.

ರಾಮಚಂದ್ರರಿಂದ ರಚಿಸಲ್ಪಟ್ಟು, ನನ್ನಿಂದ ಸಾದರಗೊಂಡ ಆ ಕಲಸುಮೇಲೋಗರ ಇಂಗ್ಲೀಷ್–ಹಿಂದಿ ಎಕ್ಸ್‌ಟ್ರಾವಗಾನ್ಜಾದ ಧಾಳಿಯಿಂದ ಕನ್ನಡ ನಾಡಿನ ಕೇಂದ್ರ ಪ್ರದೇಶದ ಕನ್ನಡ ಶಾಲೆಯೊಂದರಲ್ಲಿನ ಜನಸಮೂಹ ನಿಜಕ್ಕೂ ತತ್ತರಿಸಿತು.

ಅಷ್ಟು ಹೊತ್ತಿಗೆ ನಮ್ಮ ಮಾನಿಟರ್ ಉತ್ಸಾಹದಿಂದ ಓಡುತ್ತಾ ಬಂದು ಹೆಡ್ಮಾಸ್ಟರ್ ಕಿವಿಯಲ್ಲಿ ಏನೋ ಉಸುರಿದ. ಹೈದರಾಬಾದಿನಲ್ಲಿ ನಮ್ಮ ಸೇನೆ ರಜಕಾರರ ವಿರುದ್ಧ ಧಾಳಿ ನಡೆಸಿ ಮೇಲುಗೈ ಪಡೆದ ಸಂಗತಿಯನ್ನು ರೇಡಿಯೋದಲ್ಲಿ ಬಿತ್ತರಿಸುತ್ತಿದ್ದರಂತೆ. ವಲ್ಲಭ ಭಾಯಿ ಪಟೇಲರ ಧೀರ ನಿಲುವಿನಿಂದ ಹೈದರಾಬಾದಿಗೆ ಸ್ವತಂತ್ರ ಸಿಗುವ ಘಳಿಗೆ ಹತ್ತಿರವಾಗಿತ್ತು. 1948ರ ಅಕ್ಟೋಬರ್ ಹದಿನೆಂಟು ನಿಜಕ್ಕೂ ನಾಡಿನ ಸುವರ್ಣ ದಿನವಾಗಿತ್ತು. ತುಂಬಿಬಂದ ದೇಶಭಕ್ತಿಯಿಂದ ಸಭೆ ಎದ್ದು ನಿಂತು "ವಂದೇ ಮಾತರಂ" ಹಾಡಿದರು. "ಜನಗಣಮನ"ದ ನಂತರ ಸಭಿಕರು ಸಂತಸದಿಂದ ಮನೆಗಳಿಗೆ ತೆರಳಿದರು. ದೇವರ ದಯೆ, ಕೊನೆಗೂ ವಾರ್ಷಿಕೋತ್ಸವ ಯಶಸ್ವಿಯಾಗಿ ಮುಕ್ತಾಯವಾಯಿತು.

ಸುಮಾರು ಮೂವತ್ತು ವರ್ಷಗಳ ನಂತರ, ನಮಗೆ ಪುನಃ ನಮ್ಮ ಹೆಡ್ಮಾಸ್ಟರನ್ನು ಭೇಟಿ ಮಾಡುವ ಅವಕಾಶ ಒದಗಿ ಬಂತು. ಮೊದಲೇ

ಕೃಶಕಾಯರಾಗಿದ್ದ ಅವರು ತಮ್ಮ ಎಪ್ಪತ್ತೈದನೇ ವಯಸ್ಸಿನಲ್ಲೂ ಶಾಲೆಯಲ್ಲಿ ಪಾಠ ಹೇಳುತ್ತಿದ್ದರು. ದೇಹ ಹಣ್ಣಾಗಿತ್ತು. ನಾನು ಅವರ ಮನೆಗೆ ಹೋದ ಕೂಡಲೇ ನನ್ನನ್ನು ಗುರುತಿಸಿ ಹಸನ್ಮುಖರಾದರು. ನಿಧಾನವಾಗಿ ಹಳೆಯ ಕಥೆಯನ್ನು ನೆನಪಿಸಿ, ಆನಂತರ ಅವರ ಕ್ಷಮೆ ಕೇಳುವ ನನ್ನ ಯೋಚನೆ, ಅವರನ್ನು ಕಂಡ ತಕ್ಷಣ ಮುರಿದು ಬಿತ್ತು. ಮೂವತ್ತು ವರ್ಷಗಳ ಹಿಂದೆ ಮಾಡಿದ ತಪ್ಪಿಗೆ, ಒಮ್ಮೆಲೇ ನಾನು “ಸಾರಿ” ಎಂದೆ. ಅವರು ನನ್ನ ತಪ್ಪನ್ನು ಸ್ವಲ್ಪವೂ ಮನಸ್ಸಿಗೆ ತೆಗೆದುಕೊಳ್ಳದೆ, ಪ್ರೀತಿ ವಿಶ್ವಾಸಗಳಿಂದ ನನ್ನ ಕೈಹಿಡಿದು ಒಂದೆರಡು ಒಳ್ಳೆಯ ಮಾತುಗಳನ್ನಾಡಿದರು. ತಮಗಾದ ಕ್ಲೇಶವನ್ನು ಅವರು ಸಂಪೂರ್ಣವಾಗಿ ಕ್ಷಮಿಸಿ, ನಮ್ಮ ಗುರು ಶಿಷ್ಯ ಸಂಬಂಧವನ್ನ ಪುನಃ ಚಾಲನೆಗೆ ತಂದಂತಿತ್ತು ಅವರ ಮಾತು.

ಜೀವನ ವಿಚಿತ್ರ. ಅನೇಕ ಬಾರಿ, ಅದು ಎಂದೋ ನಡೆದುಹೋದ ಘಟನೆಯನ್ನ ಪುನಃ ನಮ್ಮ ಕಣ್ಣಮುಂದೆ ತಂದು ನಿಲ್ಲಿಸಿಬಿಡುತ್ತದೆ. ಆ ಕ್ಷಣದ ಮಟ್ಟಿಗೆ ಕಾಲ ಸ್ಥಬ್ಧ.

ನಮ್ಮ ಹೆಡ್ಮಾಸ್ಟರ ಮನೆಯಿಂದ ಹೊರಬಂದಾಗ ಸಂಜೆಯಾಗಿತ್ತು. ಶಿವಮೊಗ್ಗೆಯ ಸಂಧ್ಯಾಕಾಲ, ಮನೆಗೆ ಹಿಂತಿರುಗುತ್ತಿದ್ದ ಹಸುಗಳ ಕಾಲಧೂಳಿಗೆ ಎಂದಿನಂತೆ ಬಣ್ಣದ ಮೆರಗು ನೀಡಿತ್ತು. ಜೀವನದ ಮಧುರ ಕ್ಷಣಗಳನ್ನು ನಮಗೆ ಬೇಕಾದಂತೆ ಪುನಃ ಅನುಭವಿಸುವ ಬಳುವಳಿಗಾಗಿ ಕೃತಜ್ಞತಾಭಾವದಿಂದ ನನ್ನ ಹೃದಯ ತುಂಬಿ ಬಂದಿತು.

■

---



# ಪುಷ್ಪಕವೂ ಮೂರು ನಕ್ಷತ್ರಗಳೂ...

● ಜಯಶ್ರೀ ದೇಶಪಾಂಡೆ

ನನ್ನ ಕೇಳಿದರೆ ನಮ್ಮ ದೇಶದಲ್ಲಿ ಏಳು ಸಾವಿರ ವರ್ಷಗಳ ಹಿಂದೇನೇ ಋಷಿಮುನಿಗಳೂ, ವಿಮಾನ ಕಂಡು ಹಿಡಿದಿದ್ದರು, ಆಗಲೂ ಉಳ್ಳವರು ಅದರಲ್ಲಿ ಹಾರಾಡ್ತಿದ್ರಂತೆ ಅಂತ ನಮ್ಮವರು ಕಂಡು ಹಿಡಿದು ನಾವೆಲ್ಲ ಹಿಗ್ಗಿದ್ದು ಸುಳ್ಳೇ? ಮತ್ತೆ ವಿದೇಶೀಯರೂ ಏನ್ಶಿಯೆಂಟ್ ಫ್ಲಾಯಿಂಗ್ ಮಷೀನ್ಸ್ ಆಫ್ ಇಂಡಿಯಾ ಅಂತ ಸಿಕ್ಕಾಪಟ್ಟೆ ಆಸಕ್ತಿ ತೋರಿ ನೂರೆಂಟು ವಿಷಯಗಳನ್ನು ಕೆದಕಾಡಿ ಬರೆದು, ನ್ಯಾಶನಲ್ ಜಿಯಾಗ್ರಫಿ,ಹಿಸ್ಟರಿ ಚಾನಲ್ ಈ ಎಲ್ಲರೂ ಸಾಕ್ಷಾತ್ ಕಣ್ಣೆದುರಿಗೂ ತಂದ್ರು. ಆದರೂ ಪ್ರಪಂಚದ ಬೇರೆ ದೇಶದ ಎಲ್ಲ ವಿಮಾನಗಳಿಗಿಂತ ಮೊದಲು ಲಂಕೆಯಿಂದ ಭಾರತಕ್ಕೆ, ಮತ್ತು ಭಾರತದಿಂದ ಲಂಕೆಗೆ ಇಂಟರ್ ನ್ಯಾಷನಲ್ ಹಾರಾಟ ಮಾಡಿದ್ದು ಕುಬೇರನ ಪುಷ್ಪಕ (ವಿಮಾನ) ತಾನೇ? ಆದ್ದರಿಂದ ಎಲ್ಲಕ್ಕಿಂತ ಮೊಟ್ಟ ಮೊದಲ ಅಂತಾರಾಷ್ಟ್ರೀಯ ಫ್ಲೈಟ್ ಎಂಬ ಬಿರುದು ಪಡೆದ ಪುಷ್ಪಕದ ಬಗ್ಗೆ ನಾವು ಹೆಮ್ಮೆ ಪಡೋಣ. ಇನ್ನೀಗ ಬೇಕೆಂದಾಗ ಈ ಭೂಮಿಗೋಳದ ಇಂಚಿಂಚನ್ನೂ ನಿಮಗೆ ತೋರಿಸಿಕೊಂಡು ಬರುವ ಪುಣ್ಯಕಾರ್ಯ ಮಾಡುತ್ತಿರುವ ಪಾಪದ ಬ್ರಹನ್ ಹಾರುಹಕ್ಕಿಗಳಿಗೆ ನೀನು ತಡವಾಗಿ ಯಾಕೆ ಬರ್ತೀಯ ಅಂತ ಕೇಳಿ ಮನಸ್ಸು ನೋಯಿಸಿ, ಮುಜುಗುರಕ್ಕೀಡು ಮಾಡುವುದು ಯಾಕೆ? ಅಂತ ಏರ್ ಪೋರ್ಟಿನ ಅಂಗಳದಲ್ಲಿ ಕಾದು ಕಾದು ಸುಸ್ತಾದ ಅಲ್ಲೊಬ್ಬರು ಕೇಳ್ತಾ ಇದ್ದರು.

ಕನ್ ಫ್ಯೂಸ್ ಆಯಿತಾ?

ಈ ಪ್ರಲಾಪದ ಹಿನ್ನೆಲೆ ಹೀಗುಂಟು ಕಾಣಿ!

ಸುಖವೋ ದು:ಖವೋ ಆ ರಾತ್ರಿಯಿಡೀ ಅಥವಾ ಇನ್ನೂ ಒಂದಿಷ್ಟು ಹೆಚ್ಚೇ ಸಮಯವನ್ನು ಅಲ್ಲಿ ಕಳೆಯುವುದು ನನಗೂ ನನ್ನ ಗೆಳತಿಗೂ ಅನಿವಾರ್ಯವಾಗಿತ್ತು. ನಾವೇನೂ ಆ ಕಿರುಪರಿಚಿತ ದೇಶದಲ್ಲಿ, ಅಪರಿಚಿತ ಊರಿನಲ್ಲಿ ರಾತ್ರಿ ಕಳೆಯಲು ಹೋದವರಲ್ಲ. ಸುತ್ತಾಡಬೇಕಿದ್ದದ್ದನ್ನೆಲ್ಲ ಮೊದಲ ಮೂರು ತಿಂಗಳೇ ಮಾಡಿ ಮುಗಿಸಿದ್ದೆವು ಇನ್ನು ಮುಂದಿನ ಪ್ರಯಾಣಕ್ಕೆ ಅಂತ ಏರ್ ಪೋರ್ಟಿಗೆ ಬಂದರೆ ಅಲ್ಲಿ ಕಥೆಯೇ ಬೇರೆ ಆಗಬೇಕೆ? ಮಸಲಾ, ತಪ್ಪು ಅವರದಾಗಿತ್ತು, ಏಕೆಂದರೆ ಅವರ ಪುಷ್ಪಕ (ವಿಮಾನವು) ಸಮಯಕ್ಕೆ ಬಂದೇ ಇಲ್ಲ..ಹಾಗದು ಸರಿಯಾಗಿ ಬಾರದೆ ಹೋದರೆ ಅದರಲ್ಲಿ ಕೂತು, ಮಲಗಿ ಪ್ರಯಾಣಿಸುವ ಅದೃಷ್ಟ ನಮ್ಮದಂತೂ ಆಗಲಾರದಷ್ಟೆ? ನೀವೇ ಹೇಳಿ..

ಈಗ ಇಂಟರ್ನ್ಯಾಷನಲ್ ಹಾರಾಟಗಳ ಸುದ್ದಿಗೆ ಬಂದಾದ ಮೇಲೆ ಅವುಗಳ ಗುಣಾವಗುಣಗಳು– ಇಂಗ್ಲೀಷ್‌ನಲ್ಲಿ ಪ್ರಾಸ್ ಅಂಡ್ ಕಾನ್ಸ್ ಅಂತಾರಲ್ಲ ಅವು– ನಮಗೆ ಬೇಕೋ ಬೇಡವೋ ಒದಗಿ ಬರುತ್ತವೆ... ನಮ್ಮ ದೇಶದ್ದೇ ಆಗಿರಲಿ ಅಲ್ಲಿಂದ ಹೊರಟು ಇಲ್ಲಿಗೆ ಬಂದು ಮತ್ತೆ ಅಲ್ಲಿಗೇ ಹೋಗುವ ವಿದೇಶೀ ಪುಷ್ಪಕಗಳಿರಲಿ, ಇನ್ನು ಅಲ್ಲಿಂದಲೇ ಎಲ್ಲಿಗೋ ಹೊರಟು ಅಥವಾ ಒಂದು ವಿದೇಶದಿಂದ ಇನ್ನೊಂದು ವಿದೇಶಕ್ಕೇ ಹೋಗುವ ಕನೆಕ್ಟಿಂಗ್ (ಇದನ್ನು ನಾನು 'ಕೊಂಡಿ ಜೋಡಿಸ್ಕೊಳ್ಳುವ' ಅಂತ ಭಾಷಾಂತರ ಮಾಡಿದ್ದೇನೆ..ಪರವಾಗಿಲ್ಲ ತಾನೇ?) ಪುಷ್ಪಕಗಳಿವೆ ನೋಡಿ ಅವು ಬಲು ಘಾಟಿ ಕಣ್ರೀ...ನಮ್ಮ ಪೃಥ್ವೀಗೋಳದ ಯಾವ ಭಾಗದಿಂದ ಅವು

ಹೊರಡುತ್ತವೆಯೋ ಅಲ್ಲಿ ಗಾಳಿ ಚೆನ್ನಾಗಿ ಬೀಸುತ್ತಿರಬೇಕು, ಅಂದರೆ ಬಿರುಗಾಳಿ ಇರಬಾರದು, ವಿಮಾನವನ್ನೇ ಮುಚ್ಚಿಹಾಕುವಷ್ಟು ಹಿಮ ಬಿದ್ದಿರಬಾರದು...ಆಕಾಶದಲ್ಲಿ ಭಯಂಕರವಾದ ಮೋಡಗಳು ದಟ್ಟೈಸಿ ಭೀಕರ ಬಿರುಮಳೆಯ ಬೆದರಿಕೆ ಹುಟ್ಟಿಸುತ್ತಿರಬಾರದು, ಯಾರೋ ದುಷ್ಕರ್ಮಿಗಳು ಒಳಗೆ ಬಾಂಬಿದೆ ಅಂತ ಸುಳ್ಳು ಫೋನ್ ಮಾಡಿರಬಾರದು, ಮತ್ತು ವಿಮಾನದ ಸಕಲ ಅಂಗಾಂಗಗಳೂ ಪರ್ಫೆಕ್ಟ್ ಆಗಿವೆ ಅಂತ ಅಲ್ಲಿನ ಎಂಜಿನಿಯರು ಮುಚ್ಚಳಿಕೆ ಬರೆದು ಕೊಟ್ಟಿರಬೇಕು. (ಶುದ್ಧ ಕನ್ನಡದಲ್ಲಿ ಸರ್ಟಿಫೈ ಅನ್ನಬಹುದು) ಸರಿ, ಇಷ್ಟೆಲ್ಲ ಗ್ರಹಕೂಟಗಳು ಅಚ್ಚುಕಟ್ಟಾಗಿ ಕಲೆತು ಬಂದುಬಿಟ್ಟರೆ ಸಾಕು, ಪುಷ್ಪಕವು 'ಝೂಮ್' ಅಂತ ಎದ್ದೇಬಿಡುತ್ತದೆ. ನಾವೂನೂ ಸರಸರನೆ ಒಳಸೇರಿ ಕೂತು ಊಟ ಕೊಟ್ಟೊಡನೆ ಹೊಟ್ಟೆ ತುಂಬ ತಿಂದು ಗಡದ್ದು ನಿದ್ದೆ ಮಾಡಿಬಿಡ್ತೇವೆ ತಾನೇ?

ಇನ್ನು ಅವು ಬಂದಿಳಿಯುವ ಭೂಭಾಗದಲ್ಲೂ ಇಂಥ ತೊಂದರೆಗಳಿದ್ದರೆ ನೀವು ಒಳಗೆ ಕೂತ ಮೇಲೂ ನಿಮ್ಮದೇ ಊರಿಗೆ ಹೋಗಿ ಇಳೀತೀರಿ ಅಂತ ಖಾತ್ರಿ ಉಳಿಯಲಾರದು..ಪಾಪ , ಅವರದಾದರೂ ಏನು ತಪ್ಪು? ನೆಲ ಬಿಟ್ಟೇಳುವ ಮೊದಲು ವಾಯು ವರುಣರಿಗೊಂದು ಜಪ ಸಲ್ಲಿಸಿ ಅಥವಾ ಪರ್ಜನ್ಯ ಶಾಂತಿ ಮಾಡಿಸಿ ಹೊರಡುವುದು ಅವರಿಗೆ ತಿಳಿಯದು! ಆದ್ದರಿಂದ ಅಕ್ಕಪಕ್ಕದ ಯಾವ ಊರಲ್ಲಿ ಮಳೆ, ಬಿರುಗಾಳಿಗಳಿಲ್ಲದ ಸ್ವಚ್ಛ, ಹವಾಮಾನವಿರುವುದೋ ಅಲ್ಲಿಗೆ ನಿಮ್ಮನ್ನು ಕೊಂಡೊಯ್ದು ಮತ್ತೆ ನಿಮ್ಮೂರಿಗೇ ಮುಟ್ಟಿಸುವ ಜವಾಬ್ದಾರಿ ಅವರೇ ಹೊರುತ್ತಾರೆ..ಇನ್ನು ಸಮಯ ಹಾಳಾಯಿತು, ಮೀಟಿಂಗ್ ಮುಳುಗಿತು ಅಂತ ನಾವು ಗೊಣಗಬಾರದಷ್ಟೇ! ಗೊಣಗಿದರೂ ಪ್ರಯೋಜನವೇನಿಲ್ಲ...

ಈ ಹಿನ್ನೆಲೆಯಲ್ಲಿ ನಾವೊಮ್ಮೆ ಹೀಗೆ ಪುಷ್ಪಕ ವಿಮಾನಗಳ ತೊಂದರೆಯಿಂದ ನಮ್ಮದಲ್ಲದ ಯೂರೋಪಿನ ದೇಶವೊಂದರಲ್ಲಿ ಸಿಕ್ಕಿ ಹಾಕಿಕೊಂಡದ್ದನ್ನು ಹೇಳುವ ಪ್ರಮೇಯ ಒದಗಿ ಬರುತ್ತಿದೆ..ತಾಯ್ನಾಡನ್ನಂತೂ ಮೂರು ತಿಂಗಳ ಹಿಂದೆಯೇ ಬಿಟ್ಟಾಗಿತ್ತು, ಹೋಗಿ ನೆಲೆಸಿದ್ದ ದೇಶವೂ ಏನೂ ತೊಂದರೆಗಳನ್ನು ಕೊಡದೇ ಎಷ್ಟು ಬೇಕೋ ಸುತ್ತಾಡಿ ಅಂತ ಪ್ರೀತಿ ಮಾಡಿತ್ತು, ಇನ್ನು ಅಲ್ಲಿಂದ ಅಂಕಲ್ ಸ್ಯಾಮ್ ನ ದೇಶ ಅಂದರೆ ಅಮೇರಿಕಕ್ಕೆ ಹೋಗಬೇಕಿತ್ತು, ಸರಿ, ಅವರ ಪುಷ್ಪಕವನ್ನಂತೂ ತಿಂಗಳಾನುಗಟ್ಲೆ ಮೊದಲೇ ಟಿಕೇಟು, ಮಾಡಿ ಕೇಳಿದಷ್ಟು ದುಡ್ಡು ತೆತ್ತು ಆಗಿತ್ತು.

ಇಲ್ಲಿ ನೆಮ್ಮದಿಯಾಗಿ ತಿರುಗಾಡಿಕೊಂಡು ಊರು, ಅಲ್ಲ, ದೇಶ ಬಿಡುವ ದಿನ ಲಗ್ಗೇಜೆತ್ತಿಕೊಂಡು ಏರ್ ಪೋರ್ಟಿಗೆ ಹೋದರೆ ಅಲ್ಲಿ ನಮ್ಮ ಪುಷ್ಪಕದವರು ಎದೆ ಝಲ್ಲೆನ್ನುವ ಸುದ್ದಿಯ ಜೊತೆ ಸ್ವಾಗತಿಸಿದರು, ಅಲ್ಲಿಂದ ಇಲ್ಲಿಗೆ ಬಂದು ನಮ್ಮನ್ನು ಹೊತ್ತೊಯ್ಯಬೇಕಿದ್ದ ಪುಷ್ಪಕವು ಅಲ್ಲಿನ ಏರ್ ಪೋರ್ಟು ಬಿಟ್ಟು ಎದ್ದಿರಲೇ ಇಲ್ಲ, ಅದರ ಆರೋಗ್ಯ ಸರಿಯಿಲ್ಲದ ಕಾರಣದೊಂದಿಗೆ ಅಲ್ಲಿನ ಹವಾಮಾನವೂ ಹಾರಬೇಡಿ ಅಂತ ಬೆದರಿಕೆ ಹಾಕಿತ್ತಂತೆ. ಕಳೆದ ಮೂರು ತಿಂಗಳಿಂದ ನಾವು ಝಂಡಾ ಊರಿ ಕೂತಿದ್ದ ಶೆಂಗೆನ್ ದೇಶಗಳ ರಹದಾರಿ ಪರವಾನಗಿ' (ಕನ್ನಡದಲ್ಲಿ ವೀಸಾ ಅನ್ನಬಹುದು) ಅವತ್ತು ರಾತ್ರಿಯೇ ಮುಗಿಯಲಿತ್ತು! ನಾವು ಹೊರಡಬೇಕಿದ್ದ ಜಾಗ ಬಿಟ್ಟು ಬೇರೆ ಕಡೆಗೆ ಹೋಗುವ ಹಾಗಿಲ್ಲ, ಅಲ್ಲೇ ಇನ್ನಷ್ಟು ತಳವೂರಿ ಕೂಡುವಂತಿಲ್ಲ, ಮನೆಗೂ ಹೋಗುವಂತಿಲ್ಲ..

ಪಿತ್ತ ಕೆರಳಬಾರದೆ? "ನೀವು ಈ ವಿಷಯವನ್ನು ನಮಗೆ ಫೋನು ಅಥವಾ ಮೇಲ್ ಮೂಲಕ ಯಾಕೆ ತಿಳಿಸಲಿಲ್ಲ ?" ಅಂದೆವು.

"ಕ್ಷಮಿಸಿಬಿಡಿ(ಕನ್ನಡದಲ್ಲಿ –ಸಾರಿ) ಅಂದನವನು,ನಾವೇರಲಿದ್ದ ಪುಷ್ಪಕದ ಸಿಬ್ಬಂದಿ, ಅರ್ಥಾತ ನಮ್ಮನ್ನು ಆ ವಿಮಾನದಲ್ಲಿ ಹತ್ತಿಸಿಕೊಳ್ಳಲು ರೈಟ್ ಹೇಳಬೇಕಾದವನು. "ಏನು ಮಾಡೋಣ... ಕೊನೆಗಳಿಗೆಯಲ್ಲಿ ಅಲ್ಲಿ ವೆದರ್ ಪ್ರಾಬ್ಲಮ್ ಆಗಿದೆ.." ಅಂತ ಸಪ್ಪೆ ಮುಖ ಮಾಡಿದ ಅವನಿಗೆ

" ಹಾಗಿದ್ದರೆ ಈಗ ನಮ್ಮದೇನು ಕತೆ ಹೇಳು?" ಅಂದೆವು.

" ಸಾರಿ ಬಟ್, ಯುಸೀ .. ನೀವು ಅರ್ಜೆಂಟಾಗಿ ಹೋಗಲೇಬೇಕು ಅಂತಿದ್ರೆ ಇವತ್ತೇ ಬೇರೆ ಪುಷ್ಪಕಕ್ಕೆ ನಿಮ್ಮನ್ನು ಹೇರಿಸಿ, ಅಲ್ಲ, ಏರಿಸಿ ಕಳಿಸ್ತೇನೆ, ಅದು ಕೇವಲ ಆರು ದೇಶಗಳನ್ನು ಹಾದು ಹೋಗೋ ಪ್ರಯಾಣ, ಮಧ್ಯದಲ್ಲಿ ಎರಡು ಕಡೆ ನೀವು ಕೂತ ವಿಮಾನ ಬಿಟ್ಟು ಇಳಿದು ಬೇರೆ ಫ್ಲೈಟ್ ಏರಿಬಿಡಿ, ಅದು ಶುಕ್ರವಾರ ನಿಮ್ಮನ್ನು ಖಂಡಿತ ಅಲ್ಲಿಗೆ ಮುಟ್ಟಿಸುತ್ತೆ" ಅಂತ ಅವನು ಕೊಟ್ಟ ವಿವರಣೆ ಕೇಳಿ ಎದೆಗುಂಡಿಗೆ 'ಡಬ್' ಅಂದಿತು..ನಾವು ಹೊರಟಿದ್ದು ನೇರವಾಗಿ ಹತ್ತು ಗಂಟೆಯೊಳಗೆ ಒಯ್ದು ಮುಟ್ಟಿಸುವ ಪುಷ್ಪಕಕ್ಕೆ, ಇವನು ಹೇಳಿದ ದಾರಿ ಅಲ್ಲಲ್ಲ– ಆಕಾಶದಿಂದ ಹೋದರೆ ಒಂದೂವರೆ ದಿನ!ಅದೂ ನಡು ನಡುವೆ 'ಟ್ರಾನ್ಸಿಟ್' ಅನ್ನುವ ಹತ್ತೆಂಟು ತಾಸುಗಳ ಎರಡು ಕಡೆಯ ವಿರಾಮದೊಂದಿಗೆ!!

"ವಂಡರ್ ಫುಲ್" ಅನ್ನಲು ಮನಸ್ಸು ಬರಲಿಲ್ಲ,

ಉತ್ತರವೇ ಹೊಳೆಯದೆ ಮಿಕಮಿಕನೇ ಅವನ ಮುಖವನ್ನೊಮ್ಮೆ, ಆಕಾಶವನ್ನೊಮ್ಮೆ ನೋಡುತ್ತ ನಾವು ಭಾರವಾದ ಹೃದಯದಿ0ದ ನಿಡುಸುಯ್ಯುತ್ತಿರಲು,ಅವನೇ ದಯಾರ್ದ್ರನಾಗಿ ನಮ್ಮತ್ತ ನೋಡುತ್ತ ಹೀಗೆಂದನು.

"ನೋಡಿ, ನೀವು ನಮ್ಮ ಪುಷ್ಪಕದ ಘನ ಯಾತ್ರಿಕರು, ನಿಮ್ಮ ಯೋಗಕ್ಷೇಮವು ನಮ್ಮದೇ ಕರ್ತವ್ಯ. ಆದುದರಿಂದ ನಿಮ್ಮನ್ನು ಸರಿಯಾಗಿ ಎಲ್ಲಿಗೆ ಹೋಗಬೇಕೋ ಅಲ್ಲಿಗೆ ಕಳಿಸೋ ಹೊಣೆ ನಮ್ಮದು, ಆದ್ದರಿಂದ ಅಲ್ಲೀವರೆಗೆ ನೀವು ನಮ್ಮ ಅತಿಥಿಗಳು, ನಿಮ್ಮ ಸತ್ಕಾರ ನಮ್ಮ ಜವಾಬ್ದಾರಿ..ಅಲ್ಲಿಂದ ಹೊಸಾ ಪುಷ್ಪಕ, ಅಲ್ಲಲ್ಲ– ವಿಮಾನ ಬರುವವರೆಗೆ ಈ ಹೊಟೇಲ್ ಗೆ ಹೋಗಿ ತಂಗಿಕೊಳ್ಳಿರಿ, ಆಮೇಲೆ ನಾವು ನಿಮ್ಮನ್ನು ಸಹೀ ಸಲಾಮತ್ ಕರಕೊಂಡು ಹೋಗ್ತೇವೆ.." ಅಂತ ವಿನಯಪೂರ್ವಕ ಆಹ್ವಾನ ನೀಡಿದಾಗ ಒಲ್ಲೆ ಅನ್ನಬಹುದೇ?

" ಸರಿ, ಕೊಡಪ್ಪಾ ಅದೇನು ಕೊಡ್ತೀಯೋ ಎಲ್ಲಿಗೆ ಕಳಿಸ್ತೀಯೋ ಕಳಿಸು. ನೀ ಹೇಳಿದಲ್ಲಿಗೆ ಹೋಗಲೇಬೇಕಲ್ಲ ಈಗ. ಇಲ್ಲಂದ್ರೆ ತ್ರಿಶಂಕುಗಳಾಗಿಬಿಡ್ತೀವಿ" ಅಂತನ್ನುತ್ತ ಅವನ ಮುಂದಿನಿಂದ ನಡೆದೆವು.

ಅದೆಲ್ಲ ಆಗಿ ಮುಗಿದು ರಾತ್ರಿಯ ಹೊತ್ತು ಅವನು ಕೊಟ್ಟ ಕೂಪನ್ನುಗಳನ್ನು ಒಯ್ದು ಏರ್ ಪೋರ್ಟಿನಲ್ಲೇ ಇದ್ದ ಹೋಟೆಲಿಗೆ ಒಪ್ಪಿಸಿ ಅವರ ದಿವ್ಯ ಭವ್ಯ ಆದರಾತಿಥ್ಯವನ್ನು ಯಥೇಚ್ಚವಾಗಿ ಸವಿದು ಮನಸ್ಸು ತೃಪ್ತವಾಗಿತ್ತು. ಹೊಟ್ಟೆ ತುಂಬಿ ತೇಗು ಬರತೊಡಗಿದಾಗ ಸರಿ ಇನ್ನು ಒಂದಿಷ್ಟು ವಾಮಕುಕ್ಷಿ ವಾಕ್ ಬೇಕೆನಿಸಿ ಟರ್ಮಿನಲ್ ಇಡೀ ಒಂದು ದೊಡ್ಡ ಸುತ್ತು ಬಂದು ರಾತ್ರಿ ಕೋಣೆ ಸೇರಿ

ಮಲಗಿದಾಗ ಅಲ್ಲೇ ಇದ್ದ ಆಕಾಶದಲ್ಲಿ ನಗುತ್ತಿದ್ದ ಅಷ್ಟಮಿಯ ಚಂದ್ರನ ಜೊತೆಗೆ ನಕ್ಷತ್ರಗಳು ಪಳಪಳ ಹೊಳೆಯುತ್ತಿದ್ದದ್ದು ನನ್ನ ಕಿಟಕಿಯಿಂದ ಕಾಣಿಸತೊಡಗಿತು. ಮನಸ್ಸು ಹಿಗ್ಗಿ ಖುಷಿಯಾಗಿ ಎಣಿಸಿ ನೋಡಿದೆ, ನನಗೆ ಸರಿಯಾಗಿ ಮೂರು ನಕ್ಷತ್ರಗಳು ನೇರ ಕಣ್ಣೆದುರಿನಲ್ಲೇ  ಕಾಣಿಸಿ ಮಿನುಗುತ್ತಿವೆ. ಹೌದಲ್ಲವೇ?


ನಾವು ಮಲಗಿರುವುದೂ ಮೂರು  ನಕ್ಷತ್ರಗಳ ಹಿಲ್ಟನ್ ಹೊಟೆಲು..ಇದೇನು ಕಾಕತಾಳೀಯವೇ? ಹೋಗಲಿ ಬಿಡು 'ಬೋಲೋ ತಾರಾರಾ..ಬೋಲೋ ತಾರಾರಾ..' ಅಂತ ವಿಚಿತ್ರ ಖುಶಿಯಲ್ಲಿ  ಮುಸುಕೆಳೆದೆ!

ನಿದ್ದೆ ಹತ್ತುವ ಮೊದಲು ನನ್ನ ಮೊಬೈಲ್ ಫೋನಿನಲ್ಲಿ ಒಂದು ಮೆಸೇಜು ಹೊಳೆಯುತ್ತ ಬಂತು.

"ನಾಳೆ ನಿಮ್ಮನ್ನು ಕರೆದೊಯ್ಯುವ ವಿಮಾನವು ಇಲ್ಲಿಂದ ಆಗ್ಲೇ ಹೊರಟಾಗಿದೆ..ದಯವಿಟ್ಟು ಸಮಯಕ್ಕೆ ಸರಿಯಾಗಿ ನಾಳೆ ಸಂಜೆ ವಿಮಾನ ನಿಲ್ದಾಣದಲ್ಲಿ ಹಾಜರಾಗಿರಿ.  ನಿಮಗೆ ಆಗಿರಬಹುದಾದ ಅನಾನುಕೂಲಕ್ಕಾಗಿ ನಮ್ಮ  ವಿಮಾನ ಸಂಸ್ಥೆ ವಿಷಾದಿಸುತ್ತದೆ..

ಧನ್ಯವಾದಗಳು" ಅಂತಿದ್ದ ಮುದ್ದಾದ ಅಕ್ಷರಗಳ ಸವಿ ಸುದ್ದಿ!

ಹಾಸಿಗೆಯಲ್ಲೇ ನೆಗೆದು ಕೂತು ಫೋನಿಗೆ ಒಂದು ಮುತ್ತಿಕ್ಕಿ ಅತ್ತಿತ್ತ ನೋಡಿದರೆ ಕಿಟಕಿಯಲ್ಲಿ ಮತ್ತವೇ ಮೂರು  ನಕ್ಷತ್ರಗಳು  ನನ್ನ ನೋಡಿ ನಕ್ಕವು!!



# ಓದುಗರಿಗೊಂದು ಸವಾಲು

**● ಪ್ರಕಾಶ್**

ಗಾದೆ ಯಾರಿಗೆ ಇಷ್ಟ ಇಲ್ಲ. ಗಾದೆಯ ಮಹತ್ವ "ವೇದ ಸುಳ್ಳಾದರೂ ಗಾದೆ ಸುಳ್ಳಾಗಲ್ಲ" ಎಂಬ ಗಾದೆಯಲ್ಲೇ ಅಡಗಿದೆ.

ಈ ಕೆಳಗೆ ಮೊದಲಿನ ಪಟ್ಟಿಯಲ್ಲಿ ಒಂದು ಡಜನ್ ಗಾದೆಗಳನ್ನು ಕೊಟ್ಟು ಅವುಗಳ ಕೆಳಗಿನ ಎರಡನೆಯ ಪಟ್ಟಿಯಲ್ಲಿ ಅವುಗಳು ಅನ್ವಯ ವಾಗಬಹುದಂತಹ ಪರಿಸ್ಥಿತಿಗಳನ್ನು ನಮೂದಿಸಿದ್ದೇವೆ. ಎರಡೂ ಪಟ್ಟಿಗಳ ಅಂಶಗಳನ್ನು ತಕ್ಕಂತೆ ಜೋಡಿಸುವುದಷ್ಟೇ ನಿಮ್ಮ ಕೆಲಸ.

**1.** **ಹೆತ್ತದವರಿಗೆ ಹೆಗ್ಗಣ ಮುದ್ದು**
**2.** **ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದ.**
**3.** **ಅತ್ತೆಗೊಂದು ಕಾಲ ಸೊಸೆಗೊಂದು ಕಾಲ**
**4.** **ಮಾತು ಬಲ್ಲವನಿಗೆ ಜಗಳವಿಲ್ಲ.**
**5.** **ಇಂದಿನ ಸೋಲು ನಾಳಿನ ಗೆಲುವು**
**6.** **ಎಲ್ಲರ ಮನೆಯ ದೋಸೆಯೂ ತೂತೆ**
**7.** **ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?**
**8.** **ಮಂಗನ ಕೈಗೆ ಮಾಣಿಕ್ಯ ಕೊಟ್ಟಂತೆ**
**9.** **ಹಾಸಿಗೆ ಇದ್ದಷ್ಟು ಕಾಲು ಚಾಚು**
**10.** **ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ.**
**11.** **ವೇದ ಸುಳ್ಳಾದರೂ ಗಾದೆ ಸುಳ್ಳಾಗದು**
**12.** **ಹಾಗಲಕಾಯಿಗೆ ಬೇವಿನ ಕಾಯಿ ಸಾಕ್ಷಿ**

A ಕನ್ನಡ ಸೀರಿಯಲ್‌ಗಳಿಗೆ ಇದೇ ಮೂಲಾಧಾರ.
B ಬೌದ್ಧರು ಈ ಮಾತನ್ನು ಒಪ್ಪೀಯಾರು
C ಆರ್ ಬಿ.ಐ. ಮುಖ್ಯಸ್ಥರು ಬ್ಯಾಂಕುಗಳಿಗೆ ಹೇಳಿದ ಕಿವಿಮಾತು
D ಪ್ಲಾಸ್ಟಿಕ್ ಸರ್ಜನ್ನನ ಉದ್ಗಾರ
E ಸೆಲೆಬ್ರಿಟಿಯ ಮಗನ ಸೆರೆ
F ಆರ್ಟಿಕಲ್ 370 ರದ್ದಿನ ನಂತರ ಪಾಕಿಸ್ಥಾನದ ಉದ್ಗಾರ
G ನ್ಯಾಷನಲ್ ಹೆರಾಲ್ಡ್ ಕೇಸನ್ನು ಕಪಿಲ್ ಸಿಬ್ಬಲ್ ನಡೆಸುತ್ತಿದ್ದಾರಂತೆ
H ಆರ್.ಸಿ.ಬಿ. ಇದನ್ನ ನಂಬಿಯೇ ಬದುಕಿರುವುದು
I ಸುಬ್ರಮಣ್ಯಂ ಸ್ವಾಮಿ ಇದನ್ನು ಒಪ್ಪರು.
J ಪಾಪ ಆತ ಲಂಚಾನ ಚೆಕ್ ರೂಪದಲ್ಲೇ ಪಡೆದರಂತೆ
K ಆದಿತ್ಯನಾಥನ ದರ್ಬಾರು??
L ಕಾವಲಿ ಮಗಚು ಕೈಗೆ ಹೇಳಿದ ಗುಟ್ಟು

**ಉತ್ತರ : 40ನೇ ಪುಟದಲ್ಲಿ**

●ದಂಐಅ

- ಪಕ್ವವಾದಂತೆಲ್ಲ ಸಾಹಿತಿಗೆ ತಾನೇ ತಿಳಿಯುತ್ತದೆ ತಾನು ಬರೆದಿದ್ದು ಅಷ್ಟು ಚೆನ್ನಾಗಿಲ್ಲ ಎಂಬುದು. ಈ ಅರಿವು ಆಗಿಲ್ಲದವನು ಪಕ್ವವಾಗಿಲ್ಲವೆಂದೇ ಅರ್ಥ.

- ಅಯೋಗ್ಯನೊಬ್ಬ ನಿಮ್ಮ ಮನವಿಯನ್ನು ಪುರಸ್ಕರಿಸುವದಕ್ಕಿಂತ ಯೋಗ್ಯ ಅದನ್ನು ತಿರಸ್ಕರಿಸುವುದು ಹೆಚ್ಚು ಒಳಿತು.

- ನಿನ್ನ ತುಟಿ ಆಡುತ್ತಿದೆ ನಿಜ. ಆದರೆ ನನಗೆ ವಟ ವಟ ಮಾತ್ರ ಕೇಳಿಸುತ್ತಿದೆ.

- ಐ ಹ್ಯಾವ್ ಲರ್‍ನ್ಂಟ್ ಸೊ ಮಚ್ ಫ್ರಂ ಮೈ ಮಿಸ್ಟೇಕ್ಸ್ ಐ ಅಮ್ ಥಿಂಕಿಂಗ್ ಆಫ್ ಮೇಕಿಂಗ್ ಎ ಫ್ಯು ಮೋರ್.

- ಈರುಳ್ಳಿಯನ್ನು ಅಳುವಂತೆ ಮಾಡುತ್ತೇನೆ ಒಂದು ದಿನ ನಾನು.

- ಅನೇಕ ಸರ್ಕಾರಿ ನೌಕರರಿಗೆ ಸಂಬಳ, ತುಟ್ಟಿ ಭತ್ಯೆ, ಮನೆ ಬಾಡಿಗೆ ಮುಂತಾದವು ದೇವರು ಕೊಟ್ಟಿದ್ದು. ಮೇಲೆ ಗಳಿಸಿದ್ದು ಸ್ವಂತ ಸಂಪಾದನೆ.

- ಲೇಖಕ ಒಮ್ಮೆ ಸೃಷ್ಟಿಸಿದ ಪಾತ್ರವನ್ನು ಮತ್ತೆ ತಿದ್ದಿ ಬರೆಯಲಾರ.

- ವಾಟ್ಸ್‌ಅಪ್ ಈಸ್ ಸ್ಟ್ರೇಂಜರ್ ದ್ಯಾನ್ ಫಿಕ್ಷನ್ ಲೈಕ್ ಟ್ರೂತ್.

- ಒಬ್ಬ ವಿದ್ಯಾರ್ಥಿ ಇನ್ನೊಬ್ಬನಿಗೆ: ನಿಮ್ಮ ಖಾಸಗಿತನ ಸಂವಿಧಾನಿಕ ಹಕ್ಕು ಎಂದು ಹೇಳುತ್ತಾರೆ ಮೊದಲು. ನಂತರ ನಿಮ್ಮ ಅಂಕ ಪಟ್ಟಿಯನ್ನು ಪೋಷಕರಿಗೆ ಕಳಿಸುತ್ತಾರೆ!

- ದುಃಖಕ್ಕೆ ಒಂದು ಪ್ರಮುಖ ಕಾರಣ – ಇತರರ ಸಂತೋಷವನ್ನು ಉತ್ಪ್ರೇಕ್ಷಿಸುವುದು.

- ಲೈಫ್ ಈಸ್ ಫುಲ್ ಆಫ್ ಕಾಂಪ್ಲಿಕೇಷನ್ಸ್. ಈವನ್ ವೆನ್ ಯು ಆರ್ ಬಾರ್ನ್ ದೇರ್ ಈಸ್ ಅ ಸ್ಟ್ರಿಂಗ್ ಅಟಾಚೆಡ್.


- ನಿಮ್ಮ ಶ್ರಮವನ್ನು ಇತರರು ಕಡೆಗಣಿಸಿದರೆ ಬೇಜಾರು ಪಡಬೇಡಿ. ಸೂರ್ಯನನ್ನು ನೋಡಿ. ಆವನು ಉದಯಿಸುವಾಗ ಒಂದು ಅದ್ಭುತ ದೃಶ್ಯವನ್ನು ಕಾಣಿಸುತ್ತಾನೆ. ಆದರೆ ಅದನ್ನು ನೋಡಿ ಆನಂದಿಸುವವರು ಎಷ್ಟು ಮಂದಿ?

- ಡೋಂಟ್ ಟ್ರೀಟ್ ಪೀಪಲ್ ಅಸ್ ಬ್ಯಾಡ್ ಅಸ್ ದೆ ಆರ್. ಟ್ರೀಟ್ ದೆಮ್ ಅಸ್ ಗುಡ್ ಅಸ್ ಯು ಆರ್. ■

ಬೀಚಿ ಪ್ರಕಾಶನದ

ಜನರು ಕೇಳಿದ
ಪ್ರಶ್ನೆಗಳಿಗೆ ಬೀಚಿ
ಅವರು ಸ್ವಾರಸ್ಯವಾಗಿ
ಉತ್ತರ ನೀಡಿದ್ದಾರೆ.

ಉತ್ತರಭೂಪ
ಪ್ರಶ್ನೋತ್ತರಗಳ
ಸಂಗ್ರಹ




# ಉತ್ತರಭೂಪ

"ತಾಯಿ" ಎಂಬ ಎರಡು ಅಕ್ಷರಗಳ ಬಗ್ಗೆ ನಿಮ್ಮ ಅಭಿಪ್ರಾಯ?

"ಜಗತ್ತು" ಎಂಬ ಮೂರು ಅಕ್ಷರಗಳ ಶಬ್ದಕ್ಕಿಂತಲೂ ಇದು ಬಹಳ ದೊಡ್ಡದು.

–ಬೀchi

ಭರತನಾಟ್ಯ ಹಾಗೂ ಕ್ಯಾಬರೆ ನೃತ್ಯಗಳಲ್ಲಿ ಕಲಿಯಲು ಸುಲಭ ಯಾವುದು ಸಾರ್?

ಭರತನಾಟ್ಯ ಕಲಿಯುವುದು ಕಷ್ಟ, ಕ್ಯಾಬರೆ ನೃತ್ಯವನ್ನು ಮರೆಯುವುದು ಕಷ್ಟ.

ಬೀchi

ವಿದೇಶಿಯರಂತೆ ನಾವೂ ಸಹ ತುಟಿಗೆ ತುಟಿ ಜೋಡಿಸಿ. .....

ಈ ಮಹಾ ಕಾರ್ಯಕ್ಕೆ ವಿದೇಶಿಯರೇ ಬೇಕೇ? ಅಮ್ಮ ಅನ್ನಿ ಈಗ ತುಟಿಗೆ ತುಟಿ ಜೋಡಣೆ ಆಗಲಿಲ್ಲವೇ?

ಬೀchi

ಬೆಲೆ : **299/-** ನಮ್ಮ ಅಪರಂಜಿ ಬಳಗಕ್ಕೆ ವಿಶೇಷವಾಗಿ
10% ರಿಯಾಯಿತಿ ಹಾಗೂ ಅಂಚೆ ಉಚಿತ.

ಆಸಕ್ತರು ಸಂಪರ್ಕಿಸಿ: **M: 9845264304**
**Phonepay, Google pay** ಜೊತೆಯಲ್ಲಿ ತಮ್ಮ ವಿಳಾಸವನ್ನು
ಈ ನಂಬರಿಗೆ ಕಳುಹಿಸಿ **9845264304**
ಇತರ ಪುಸ್ತಕಗಳ ಮಾಹಿತಿ ಪಡೆಯಲು ನಮ್ಮ ಅಂತರ್ಜಾಲ www.beechi.in

# ಕಾಂಟ್ರ್ಯಾಕ್ಟರ್ ಪಾತಾಳಯ್ಯ – ಮಾತುಕತೆ.

● ಸಿ.ಆರ್.ಸತ್ಯ

"ಸಾಹುಕಾರ್ ಪಾತಾಳಯ್ಯನವರಿಗೆ ನಮಸ್ಕಾರ."

"ನಮಸ್ಕಾರ, ನಮಸ್ಕಾರ. ಅಯ್ಯೋ, ನಾನ್ಯಾವ ಸಾಹುಕಾರ ಬಿಡಿ. ಏನು ಸಮಾಚಾರ?"

"ಏನಿಲ್ಲ. ನೀವು ಕಳೆದ ಹತ್ತು ವರುಷಗಳ ತನಕ ಕಾಂಟ್ರ್ಯಾಕ್ಟರ್ ಸಿದ್ದಪ್ಪ ಅಂತ ಹೆಸರುವಾಸಿ ಆಗಿದ್ರಿ. ಈಗ ನೀವು ಸಾಹುಕಾರ್ ಪಾತಾಳಯ್ಯ ಆಗಿದೀರಲ್ಲ, ಹೇಗೆ ಅಂತೀನಿ?"

"ಎಲ್ಲಾ ಈ ಮಾಧ್ಯಮಗಳ ಗಲಾಟೆಯಿಂದ ಕಣ್ರಿ. ಹತ್ತು ವರುಷಗಳಿಂದ ನಾನು ಬೆಂಗಳೂರು ಇನ್ನು ಕೆಲವು ಊರುಗಳಲ್ಲಿ ಪಾಟ್ ಹೋಲ್ ಕಾಂಟ್ರ್ಯಾಕ್ಟರ್ ಆಗಿದ್ದೀನಲ್ಲ,, ಏನೋ ಒಂದಿಷ್ಟು ಹಣ ಸಂಪಾದಿಸಿದೆ. ಅದಕ್ಕೆ ಹೊಟ್ಟೆಕಿಚ್ಚಿನಿಂದ ಕೆಲವರು ನನಗೆ ಪಾತಾಳಯ್ಯ ಅಂತ ನಾಮಕರಣ ಮಾಡಿದ್ರು. ಅವರ ಪ್ರಕಾರ ನಾನೇ ಪಾಟ್ ಹೋಲ್ ಗಳನ್ನು ಅಗೆದು ನಾನೇ ಮುಚ್ಚಿ, ದುಡ್ಡು ಹೊಡೀತಾ ಇದೀನಿ ಅಂತ ."

"ಹಾಗೇ ಹೇಳೋದು ನಿಜ ಅಲ್ಲವೇ?"

"ಸ್ವಲ್ಪ ನಿಜವೇನೋ ಇದೆ ಬಿಡಿ. ಇಲ್ಲದಿದ್ರೆ ನಮ್ಮಂತಹವರು ಬದುಕೋದು ಹೇಗೆ?"

"ಇಂತಹ ಕಾರ್ಯಸಾಧನೆಯನ್ನು ಹೇಗೆ ನಡೆಸ್ತೀರಿ ಅಂತ ಕೇಳಬಹುದೇ?"

"ದಯವಿಟ್ಟು ಇದನ್ನು ಗೋಪ್ಯವಾಗಿಡಿ. ನನ್ನದೇ ಒಂದು ಪಾಟ್ ಹೋಲ್ ಗ್ಯಾಂಗ್ ಇದೆ. ನಾಲ್ಕು ಜನರ ಗ್ಯಾಂಗ್. ಅವರಿಗೆ ಒಂದು ಜೀಪ್ ಮತ್ತೆ ನಾಲ್ಕು ಪಿಕಾಸಿಗಳನ್ನ ಕೊಟ್ಟಿದ್ದೀನಿ. ಮಧ್ಯ ರಾತ್ರಿ ಅವರು ಪೋಲಿಸಿನವರಿಗೆ ಕಾಣಿಸದ ಜನರಿಲ್ಲದ ರಸ್ತೆಗಳನ್ನು ಪತ್ತೆ ಹಚ್ಚಿ, ಥಟ್ಟನೆ ಜೀಪ್‌ನಿಂದ ಕೆಳಗೆ ಇಳಿದು, ಕೈಲಾದಷ್ಟು ರಸ್ತೆಯ ಒಳ್ಳೆ ಭಾಗದಲ್ಲಿ ಒಂದೋ ಎರಡೋ ಅಡಿ ಆಳದ ಗುಂಡಿ ಅಗೆದು ಕಣ್ಮರೆ ಆಗ್ತಾರೆ. ಹೀಗೇನೇ ಅದೇ ರೋಡ್‌ನಲ್ಲೋ ಅಥವಾ ಬೇರೇ ಒಳ್ಳೆ ಟಾರ್ ಹಾಕಿರೋ ರೋಡ್‌ನಲ್ಲೋ, ಒಂದು ರಾತ್ರಿಯಲ್ಲಿ ಹತ್ತು, ಹನ್ನೆರಡು ಕಡೆ ಅಗೆದು ಹಾಕ್ತಾರೆ. ನಾನು ಒಂದು ಗುಂಡಿಗೆ ಇಷ್ಟು ಫೀಸ್ ಅಂತ ಅವರಿಗೆ ಕೊಟ್ಟು ಬಿಡ್ತೀನಿ."

"ಆಮೇಲೇ..?"

"ಆಮೇಲೆ ಏನ್ರಿ, ಮಾರನೇ ದಿವಸವೇ ಹೆವಿ ಟ್ರಾಫಿಕ್ ನಿಂದ ಗುಂಡಿ ಅಗಲ ಆಗ್ತಾ ಹೋಗುತ್ತೆ. ಮಳೆ ಬಂದರೆ ಇನ್ನೂ ಚೆನ್ನ. ಮೂರು ನಾಲ್ಕು ದಿನಗಳಲ್ಲಿ ಅದು ಒಂದು ಪಾಟ್ ಹೋಲ್ ಆಗುತ್ತೆ. ಸರಿ ಇನ್ನೊಂದು ವಾರದಲ್ಲಿ ಒಬ್ಬರೋ ಇಬ್ಬರೋ ಸ್ಕೂಟರ್ ಬಿಡೋವರು ಪಾಟ್ ಹೋಲ್‌ಗೆ ಗಮನ ಕೊಡದೇ ಮಗುಚ್ಕೋತಾರೆ. ಅಥವಾ ಒಂದು ಟೆಂಪೋ ಮಗುಚಿ ಕೊಳ್ಳುತ್ತೆ. ಸರಿ, ಜನ, ಮಾಧ್ಯಮದವರು ಇದನ್ನ ಬಿಸಿ ಸುದ್ದಿಅಂತ ಎಲ್ಲಾ ಕಡೆ ಕೂಗಾಡ್ತಾರೆ. ಕಾರ್ಪೋರೇಶನ್ ಅವರು ಇನ್ನೊಂದು ತಿಂಗಳಲ್ಲಿ ಸರಿಮಾಡ್ತೀವಿ ಅಂತಾರೆ. ಆದ್ರೆ ಮಿನಿಸ್ಟರ್ ಸಾಧ್ಯವಿಲ್ಲ, ಇದನ್ನು ಎರಡು ದಿನದಲ್ಲೇ ಮುಚ್ಚಿ ಅಂತ ಹುಕುಂ ಮಾಡ್ತಾರೆ. ಎರಡು ದಿನಗಳಲ್ಲಿ ಅವರು ಟೆಂಡರ್ ಕರೆದು ಕಾಂಟ್ರ್ಯಾಕ್ಟ್ ಅನ್ನು ಕೊಡೋದಕ್ಕೆ ಸಾಧ್ಯವೆ? ಇಲ್ಲ. ತಕ್ಷಣ

ಅವರು ನನಗೆ ಫೋನ್ ಮಾಡಿ, ಸಿದ್ದಪ್ಪ, ಹೇಗೋ ನೀವೇ ಸರಿಮಾಡಿಕೊಡೀಪ್ಪ. ನಿಮಗೆ ಡಬಲ್ ಚಾರ್ಜ್ ಕೊಡ್ತೀವಿ ಅಂತ ಬೇಡ್ಕೋತಾರೆ."

"ನೀವು ತಕ್ಷಣ ಒಪ್ಪಿಕ್ಕೊಳ್ಳುತ್ತೀರಾ?"

"ಇಲ್ಲ. ಸ್ವಲ್ಪ ಸತಾಯಿಸ್ತೀನಿ. ನಿಮ್ಮದೇ ಕಾಂಟ್ರ್ಯಾಕ್ಟ್ ಗಳನ್ನ ಬೇರೆ ರೋಡ್ ಗಳಲ್ಲಿ ಅರ್ಜೆಂಟ್ ಆಗಿ ಮಾಡ್ತಾ ಇದ್ದೀನಿ. ಅವನ್ನು ಅರ್ಧದಲ್ಲಿ ಕೈ ಬಿಟ್ಟರೆ ನನಗೆ ತುಂಬಾ ನಷ್ಟ ಆಗುತ್ತೆ ಅಂತೀನಿ. ಅದಕ್ಕೆ ಅವರು, ಅಯ್ಯೋ, ನಾವು ಹೇಳ್ತಿರೋ ಪಾಟ್ ಹೋಲ್‌ಗಳು ಅರ್ಜೆಂಟ್ ಕೇಸ್‌ಗಳು. ಆ ರಸ್ತೆನಲ್ಲಿ ಇನ್ನೊಂದೆರಡು ದಿನಗಳಲ್ಲಿ ಮಂತ್ರಿಯೊಬ್ಬರು ಅವರ ಹುಟ್ಟಿದ ಹಬ್ಬದ ಆಚರಣೆಗೆ ಅಂತ ಹೋಗಬೇಕಿದೆ. ಇನ್ನಷ್ಟು ಜಾಸ್ತಿ ದುಡ್ಡು ಕೊಡೋಣವಂತೆ, ಗುಂಡಿಗಳನ್ನ ಮುಚ್ಚಿ ಕೊಟ್ಬಿಡಿ ಅಂತ ಬೇಡ್ಕೋತಾರೆ. ಆಯ್ತು ಅಂತ ಒಪ್ಪಿಕೋತೀನಿ"

"ತಕ್ಷಣ ಹೇಗೆ ಮುಚ್ಚುಬಿಡ್ತೀರಾ?"

"ಅಯ್ಯೋ, ಅದಕ್ಕೇನು ಟೆಕ್ನಾಲಜಿ ಬೇಕೇನ್ರೀ? ನಮ್ಮ ಪಿಕಾಸಿ ಗ್ಯಾಂಗ್ ಇದೆಯಲ್ಲಾ, ಅದಕ್ಕೇ ಹೇಳ್ತೀನಿ. ಗುಂಡಿ ಅಗೆದ ನಾಲ್ಕು ಜನಾನೇ ಈಗ ಮುಚ್ಚೋ ನಾಟಕ ಆಡ್ತಾರೆ. ರಾತ್ರೋ ರಾತ್ರಿ, ಗುಂಡಿಗೆ ಜೆಲ್ಲಿ, ಟಾರ್ ತುಂಬಿಸೋ ಬದಲು, ಮಣ್ಣು ಮಸಿ ತುಂಬಿಸಿ, ಅದರ ಮೇಲೆ ಟಾರ್ ನಿಂದ ಕರೀ ಪೈಂಟ್ ಹೊಡೀತಾರೆ. ಬೆಳಿಗ್ಗೆ ಆಗೋ ಹೊತ್ತಿಗೆ ಪಾಟ್ ಹೋಲ್ ಇದ್ದ ಜಾಗ ಹೊಸಾ ರಸ್ತೆಯೇನೋ ಅನ್ನುವ ಹಾಗೆ ಕಾಣುತ್ತೆ. ಮಂತ್ರಿಗಳ ಕಾರು ಒಂದೆರಡು ದಿನಗಳು ಹಾಯಾಗಿ ಓಡಾಡುತ್ವೆ. ಅಷ್ಟರೊಳಗೆ ನಾನು ನನ್ನ ಬಿಲ್ ಸಬ್ಮಿಟ್ ಮಾಡಿ ಪೇಮೆಂಟ್ ಗಿಟ್ಟಿಸ್ಬಿಡ್ತೀನಿ".

"ಹೀಗೇನೇ ನೀವು ಸಾಹುಕಾರರಾಗಿದ್ದು?"

"ಏನೋ, ಹತ್ತು ಹನ್ನೆರಡು ಕೋಟಿ ಮಾಡ್ಕೊಂಡೆ. ಅದು ಕಾರ್ಪೋರೇಶನ್‌ಗೆ ಆಗಲೀ, ಸರಕಾರಕ್ಕಾಗಲೀ, ಏನು ಲೆಕ್ಕ ಬಿಡಿ. ಹೀಗೇ ಹತ್ತು ವರುಷದಿಂದ ನಡೆಸಿಕೊಂಡು ಬರುತ್ತಾ ಇದೀನಿ."

"ವಯಸ್ಸಾಯ್ತು. ನೀವು ಈ ದುಡ್ಡು ಮಾಡಿಕೊಳ್ಳೋ ಕೆಲಸದಿಂದ ನಿವೃತ್ತಿ ಆಗೋಲ್ವೇ?"

"ಆಗ್ತಾ ಇದೀನಿ. ನನ್ನ ಮಗ ಇದನ್ನು ಮುಂದುವರಿಸ್ತಾನೆ. ಅದಕ್ಕೇ ಅಂತಲೇ ಅವನು ಸಿವಿಲ್ ಎಂಜಿನಿಯರಿಂಗ್ ಡಿಪ್ಲೊಮಾ ಓದಿದಾನೆ. ಆದರೆ ಪರೀಕ್ಷೆಯಲ್ಲಿ ಪಾಸ್ ಆಗ್ತಿಲ್ಲ. ಆದರೂ ಬುದ್ಧಿವಂತ. ಅವನು ಸಿಂಗಾಪುರ್‌ನಿಂದ ಒಂದು ಸ್ಪೆಶಲ್ ಮೆಶಿನ್ ತರಸ್ಕೊತಾ ಇದ್ದಾನೆ. ಅದನ್ನ ನಮ್ಮ ಜೀಪ್ ಕೆಳಗೆ ಫಿಕ್ಸ್ ಮಾಡ್ಕೊಳ್ತಾನಂತೆ. ನಮ್ಮ ನಾಲ್ಕು ಜನರ ಪಿಕಾಸಿ ಗ್ಯಾಂಗ್ ಬದಲು ಇವನು ಜೀಪ್ ನಲ್ಲಿ ಎಲ್ಲಿ ರಸ್ತೆ ಗುಂಡಿ ಮಾಡ್ಬೇಕೋ, ಅಲ್ಲಿ ಹೋಗಿ ನಿಂತ್ಕೊಂಡು ಒಂದು ಬಟನ್ ಅಮುಕಿದರೆ ಸಾಕು, ಮೆಶಿನ್, ಜೀಪ್ ಕೆಳಗೇ ಐದೇ ನಿಮಿಷದಲ್ಲಿ ಗುಂಡಿ ಮಾಡುತ್ತಂತೆ. ಹೀಗೆ ಅವನು ಒಂದು ರಾತ್ರೀಲಿ ಯಾರಿಗೂ ಸುಳಿವೇ ಸಿಕ್ಕದ ಹಾಗೆ ಹತ್ತಾರು ಪಾಟ್ ಹೋಲ್‌ಗಳನ್ನು ಒಂದು ಗಂಟೆ ಕಾಲದಲ್ಲಿ ಮಾಡ್ತೀನಿ ಅಂತ ಹೇಳ್ತಿದಾನೆ. ಇದರಿಂದ ಪಾಟ್ ಹೋಲ್‌ಗಳನ್ನು ಮುಚ್ಚೋ ಕಾಂಟ್ರ್ಯಾಕ್ಟ್ ಗಳೂ ಹೆಚ್ಚಾಗುತ್ವೆ. ನನಗಿಂತ ಜಾಸ್ತಿ ಸಂಪಾದಿಸುತ್ತಾನೆ ಬಿಡಿ".

"ಸಂತೋಷ, ಸಂತೋಷ ಪಾತಾಳಯ್ಯನವರೆ...... ಯಾಕೋ ತಲೆ ತಿರುಗುವ ಹಾಗಿದೆ. ನಾನು ಬರಲೆ?" ■

# " ಎದ್ದೇಳಜ್ಜಿ...ತಿಪಟೂರು ಬಂತು "

## ಎ.ವಿಜಯೇಂದ್ರ ರಾವ್

ಶಿವಮೊಗ್ಗದಿಂದ ಬೆಂಗಳೂರಿಗೆ ಹೋಗುವ ರಾತ್ರಿ ರೈಲು ಇನ್ನೇನು ಹೊರಡುವಷ್ಟರಲ್ಲಿ ಒಬ್ಬರು ವಯಸ್ಸಾದ ಅಜ್ಜಿ ಅವಸರದಿಂದ ಬಂದು ಪರಮೇಶಿ ಪಕ್ಕದಲ್ಲಿ ಕುಳಿತು ಉಸ್ಸಪ್ಪಾ ಅಂತ ಗಾಳಿ ಬೀಸಿಕೊಂಡರು. ನಂತರ, ಸುತ್ತುಮುತ್ತಲೆಲ್ಲಾ ಗಮನಿಸಿ ಏನನ್ನಿಸಿತೋ ಏನೋ, ಪರಮೇಶಿ ಹತ್ತಿರ – ನೋಡಪ್ಪಾ, ನೀನು ನನ್ನ ಮೊಮ್ಮಗನ ತರಾ ಇದ್ದೀಯಾ, ಅದಕ್ಕೆ ನಿನ್ನ ಬಳಿ ಒಂದು ಸಹಾಯ ಕೇಳ್ತೀನಿ ಮಾಡ್ತೀಯಾಪ್ಪ ? ಎಂದು ಸಂಕೋಚದಿಂದ ಕೇಳಿದಾಗ, ಪರಮೇಶಿ – ಮೊಮ್ಮಗ ಅಂತೀರಾ, ನೀವೇನೂ ಸಂಕೋಚ ಪಡದೆ ಕೇಳಿ, ಏನಿದ್ದರೂ ನಾನು ಸಂತೋಷದಿಂದ ಮಾಡ್ತೀನಿ ಎಂದಾಗ, ಅಜ್ಜಿಯು....

ಏನಿಲ್ಲಪ್ಪ, ನಾನು ನನ್ನ ಹತ್ತಿರದ ಸಂಬಂಧದವರ ಒಂದು ಮದುವೆಗಾಗಿ ತಿಪಟೂರಿಗೆ ಹೊರಟಿದ್ದೇನೆ. ಅವರಿಗೆ ನಾನೇ ಎಲ್ಲಾ. ನಾನಿಲ್ಲದೆ ಮದುವೆಯೇ ಜರುಗುವುದಿಲ್ಲ. ಈ ರೈಲು ತಿಪಟೂರಿಗೆ ಮಧ್ಯರಾತ್ರಿ ಮೂರು ಗಂಟೆಗೆ ತಲುಪತ್ತೆ ಅನ್ನಿಸುತ್ತೆ. ಆದರೆ, ನನಗೆ ಮಧ್ಯರಾತ್ರಿ ಏಳುವುದೇ ತುಂಬಾ ಕಷ್ಟ. ಆದ್ದರಿಂದ ನೀನು ನನಗೆ ಖಂಡಿತವಾಗಿ ಮೂರು ಗಂಟೆಗೆ ಎಬ್ಬಿಸಿ ಪ್ಲಾಟ್ ಫಾರ್ಮ್‌ನಲ್ಲಿ ಇಳಿಸಿಬಿಡು. ನಾನು ಗಾಡನಿದ್ರೆಯಲ್ಲಿದ್ದು ಏಳದಿದ್ದರೆ, ನನ್ನನ್ನು ಹಾಗೆ ಎತ್ತಿಕೊಂಡು ಲಗ್ಗೇಜ್ ಸಮೇತ ಪ್ಲಾಟ್ ಫಾರ್ಮ್ ಬೆಂಚಿನಲ್ಲಿ ಮಲಗಿಸಿಬಿಡು. ನಾನು ಬೆಳಗಾದ ಮೇಲೆ ಮದುವೆ ಮಂಟಪಕ್ಕೆ ಹೋಗುತ್ತೀನಿ – ಎಂದು ಅಜ್ಜಿ ಹೇಳಿದಾಗ, ಪರಮೇಶಿ – ನೀವೇನೂ ಯೋಚಿಸಬೇಡಿ ಅಜ್ಜಿ, ನಾನು ಮೊಬೈಲ್ ಫೋನ್‌ನಲ್ಲಿ ಅಲಾರಂ ಇಟ್ಟುಕೊಂಡು ಎದ್ದು ನಿಮ್ಮನ್ನು ತಿಪಟೂರಿನಲ್ಲಿ ಇಳಿಸುವುದು ನನ್ನ ಜವಾಬ್ದಾರಿ. ನೀವೇನೂ ಯೋಚಿಸದೆ ಆರಾಮವಾಗಿ ಮಲಗಿ ಎಂದಿದ್ದೆ ತಡ, ಅವರು ಮುಸುಕು ಹಾಕಿಕೊಂಡು ನಿದ್ರಿಸಲು ತೊಡಗಿದರು.

ಬೆಳಿಗ್ಗೆ ಆರೂವರೆಗೆ ರೈಲು ಮೆಜೆಸ್ಟಿಕ್ ಸ್ಟೇಷನ್‌ಗೆ ಬರುತ್ತಿದ್ದಂತೆ...., ಯಾರೋ ಜೋರು ಧ್ವನಿಯಲ್ಲಿ ಪರಮೇಶಿಗೆ ಬೈಯ್ಯುತ್ತಿದ್ದಂತೆ ಅನ್ನಿಸಿತು. ಕಣ್ಣು ಹೊಸಕಿ ನೋಡಿದರೆ.. ಹೌದು, ಅದೇ ಅಜ್ಜಿ...!, ನಾನು ಇವನಿಗೆ ಗಿಣಿಗೆ ಹೇಳೋ ಹಾಗೆ ಹೇಳಿದ್ದೆ. ತಿಪಟೂರಿನಲ್ಲಿ ಮದುವೆಗೆ ಹೋಗಬೇಕು, ನಾನಿಲ್ಲದೆ ಅಲ್ಲಿ ಮದುವೆಗೆ ಚಾಲನೆಯೇ ಇರಲ್ಲ. ಹೇಗಾದ್ರೂ ಎಬ್ಬಿಸಿ ಇಳಿಸು ಅಂತ, ಈಗ ನೋಡಿದ್ರೆ ಇವನೇ ಗಡದ್ದಾಗಿ ನಿದ್ದೆ ಮಾಡಿ ಈಗ ಏಳುತ್ತಿದ್ದಾನೆ – ಅಂತ ಹೇಳಿ ಯದ್ವಾತದ್ವಾ ಬೈಯಲು ತೊಡಗಿದಾಗ, ಸಹ ಪ್ರಯಾಣಿಕರು ಸಹ ಅಜ್ಜಿಗೆ ಸಹಾನುಭೂತಿ ತೋರಿಸಿ ನನಗೆ ಅವರವರು ತಮಗೆ ತಿಳಿದ ಎಲ್ಲಾ ಭಾಷೆಯಲ್ಲೂ ಬೈಯ್ಯಲು ತೊಡಗಿ, ಇನ್ನೇನು ಏಟು ಬೀಳುವಷ್ಟರಲ್ಲಿ...ಒಬ್ಬರು ಮಾತ್ರ ನನ್ನ ಬಗ್ಗೆ ಕನಿಕರ ತೋರಿಸಿ – ಅಲ್ರೀ, ಎಲ್ಲರೂ ಅಷ್ಟೊತ್ತಿನಿಂದ ನಿಮ್ಮನ್ನು ಬಾಯಿಗೆ ಬಂದಂತೆ ಬೈಯ್ತಾ ಇದ್ದಾರೆ. ನೀವು ಮಾತ್ರ ಏನೂ ಆಗಿಲ್ಲದವರಂತೆ ಏನು ಯೋಚಿಸುತ್ತಾ ಇದ್ದೀರಾ ಅಂತ ಕೇಳಿದಾಗ.....

ಪರಮೇಶಿ – ಅಲ್ಲಾ, ಹಾಗಾದರೆ ಅವರು ಬೇಡ ಬೇಡವೆಂದು ಗೋಗರೆದರೂ, ನಾನು ನನ್ನ ಬಲವನ್ನೆಲ್ಲಾ ಉಪಯೋಗಿಸಿ ಆ ಅಜ್ಜಿಯನ್ನು ಎತ್ತಿಕೊಂಡು ಹೋಗಿ ತಿಪಟೂರಿನ ರೈಲ್ವೆ ಪ್ಲಾಟ್ ಫಾರಂ ಬೆಂಚಿನ ಮೇಲೆ ಬಿಟ್ಟು ಬಂದನಲ್ಲಾ...ಅವರು ಇನ್ಯಾವ ರೀತಿಯಲ್ಲಿ ನನಗೆ ಬೈಯ್ತಾ ಇದ್ದಾರೋ ಅಂತ ಯೋಚಿಸುತ್ತಿದ್ದೆ ಎಂದಾಗ, ಆ ಬಡಪಾಯಿ ಇನ್ನೊಂದು ಅಜ್ಜಿ ಬಗ್ಗೆ ಎಲ್ಲರ ಅನುಕಂಪ ಇನ್ನೂ ಜಾಸ್ತಿಯಾಯಿತು. ಇದನ್ನು ಗಮನಿಸಿದ ಪರಮೇಶಿ, ಮೆಲ್ಲಗೆ ಅಲ್ಲಿಂದ ಜಾಗ ಖಾಲಿ ಮಾಡಿ, ರೈಲಿನಿಂದ ಇಳಿದು ಗುಂಪಿನಲ್ಲಿ ಗೋವಿಂದನಾದ....!

# ಶೂಟ್, ಶೂಟ್, ಶೂಟಿಂಗ್

● **ಸಹನಾ ಪ್ರಸಾದ್**

ಸಾಲಾಗಿ 10–12 ಸೀರೆಗಳು ಮಂಚದ ಮೇಲೆ ಹರಡಿ ಕೂತು ನಗುತ್ತಿದ್ದಿದ್ದನ್ನು ನೋಡಿ ಮನೆ ಕೆಲಸ ಮಾಡುವ ರೂಪ ಹುಬ್ಬೇರಿಸಿದಳು. " ಏನು ಆಂಟಿ, ನಿಮ್ಮ ಫ್ರೆಂಡ್ಸ್ ಮೀಟ್ ಗೆ ರೆಡಿ ಆಗುತ್ತಾ ಇದೀರಾ? ಗೂಗಲ್ ಮೀಟ್ ಅಥವಾ ಜೂಮ್ ಕಾಲ್?" ಅವಳು ನಕ್ಕ ಪರಿಗೆ ಮೈ ಉರಿಯಿತು. ಹೋದ ಸಲ ನನಗೆ ಸೀರೆ ಆಯ್ಕೆಯಲ್ಲಿ ಸಹಾಯ ಮಾಡಿ, ಮೀಟ್ ಸೆಟ್ ಅಪ್ ಮಾಡಲು ಸಹಾಯ ಮಾಡಿದ್ದು ಇವಳೇ ಎನ್ನುವ ಒಂದೇ ಕಾರಣಕ್ಕೆ ಇವಳು ಆಮೇಲೆ ಆಡಿದ ಮಾತುಗಳನ್ನು ಮನ್ನಿಸಿದ್ದೇನೆ. ಮೀಟಿಂಗ್ ಮುಗಿದ ಮೇಲೆ ನನ್ನ ಪಟಗಳನ್ನು ವಿವಿಧ ಭಂಗಿಯಲ್ಲಿ ತೆಗೆಯಲು ಸಹಾಯ ಮಾಡಿದ್ದೂ ಇವಳೇ. ಆದರೆ ವ್ಯಂಗ್ಯ ಬಾಣದ ಮಾತುಗಳು ಕೂಡ ತೂರಿ ಬಿಟ್ಟಿದ್ದಳು." ಅಯ್ಯೋ, ನಿಮ್ಮೆಲ್ಲಾ ಸ್ನೇಹಿತೆಯರು ಅಜ್ಜಿಯರಾದರೂ ಯುವತಿಯರನ್ನು ನಾಚಿಸುವಂತೆ ಡ್ರೆಸ್ ಮಾಡಿಕೊಂಡಿದ್ದಾರೆ. ಆದರೆ ಪಾಪ, ವಯಸ್ಸು ಮರೆಮಾಚಲಿಕ್ಕೆ ಸಾಧ್ಯವೇ?" ಅವಳು ನನ್ನನ್ನೂ ಸೇರಿಸಿ ಆಡಿರುವ ಮಾತುಗಳು ಎಂಬ ಗುಮಾನಿ, ಆದರೆ ಮನೆ ಕೆಲಸಗಾರ್ತಿ ಮನೆಯವರಿಗಿಂತ ಹೆಚ್ಚು, ಆದ್ದರಿಂದ ಸುಮ್ಮನಾದೆ.

ಮಕ್ಕಳ ಆನ್ಲೈನ್ ಕ್ಲಾಸು ಇತ್ಯಾದಿ ರೂಪಳನ್ನು ಕಂಪ್ಯೂಟರ್ ಬಳಕೆಯಲ್ಲಿ ಪರಿಣಿತಳಾಗಿ ಮಾಡಿದೆ. ನನ್ನಂತಹವರನ್ನು ಕೂಡ ಮೀರಿಸಿದ್ದಾಳೆ ಈಕೆ. ಅಷ್ಟಲ್ಲದೇ ನನಗೂ ಸಹಾಯ ಮಾಡುತ್ತಾಳೆ, ಸ್ನೇಹಿತೆಯರ ಕಾಲ್ ಗೆ ರೆಡಿ ಮಾಡುವುದು, ಸೀರೆಗೆ ಮಾಚಿಂಗ್ ಒಡವೆಗಳನ್ನು ಎತ್ತಿಡುವುದು, ಮುಖ್ಯವಾಗಿ ವಿವಿಧ ಭಂಗಿಗಳಲ್ಲಿ ನನ್ನ ಪಟಗಳನ್ನು ಒಂಚೂರೂ ಬೇಸರವಿಲ್ಲದೆ ಸಹನೆಯಿಂದ ತೆಗೆಯುವುದು. ಇಷ್ಟು ಸಾಕಲ್ಲ ನನಗೆ ಆಪ್ತಳಾಗಲು?

ಇರಲಿ, ಈಗ ನಾನು ತಾಳ್ಮೆ ಕಳೆದುಕೊಳ್ಳದೆ ಇರಬೇಕು. ಈ ಸೀರೆ ಸೆಲೆಕ್ಷನ್ ಮುಗಿಯಲಿ ಎಂದು ಬಾರದ ನಗು ಬರೆಸಿಕೊಂಡು ಮೇಲುನುಡಿದೆ " ಶೂಟಿಂಗಿನಲ್ಲಿ ಭಾಗವಹಿಸಲು ಹೋಗುತ್ತಾ ಇದ್ದೀನಿ" ಅಚ್ಚರಿಗೊಂಡಳು ಅವಳು " ನೋಡುವುದಕ್ಕಾ ಅಥವಾ ನೀವೂ ಏನಾದರೂ ರೋಲ್ ಮಾಡುತ್ತಾ ಇದೀರಾ?" ಹೆಮ್ಮೆಯಿಂದ ನುಡಿದೆ " ಪ್ರಮುಖ ರೋಲ್ ಮಾಡುತ್ತಾ ಇದ್ದೀನಿ"

ಅವಳ ಮುಖದಲ್ಲಿ ನೂರು ಅನುಮಾನಗಳು ಜತೆಗೆ ಅಪನಂಬಿಕೆ, ಅಪಹಾಸ್ಯ ಮೂಡಿದರೂ ತಡೆ ಹಿಡಿದಳು. " ಒಂದು ಕ್ಲಾಸ್ ರೆಕಾರ್ಡಿಂಗ್ ಕಣೆ. ನಾನು ಕ್ಯಾಮೆರಾಗೆ ಪಾಠ ಮಾಡುವುದನ್ನು ರೆಕಾರ್ಡ್ ಮಾಡಿಕೊಳ್ಳುತ್ತಾರೆ, ನನ್ನ ಹಳೆ ವಿದ್ಯಾರ್ಥಿ , ನನ್ನಂತಹ ನಿವೃತ್ತ ಶಿಕ್ಷಕರನ್ನು ಸೇರಿಸಿಕೊಂಡು ಒಂದಷ್ಟು ಶೈಕ್ಷಣಿಕ ವೀಡಿಯೊಗಳನ್ನು ತಯಾರಿಸುತ್ತಿದ್ದಾನೆ . ಸ್ಟುಡಿಯೋ ಬುಕ್ ಮಾಡಿದಾನೆ " ಎಂದೆಲ್ಲಾ ವಿವರಗಳು ಸಿಕ್ಕ ಮೇಲೆ ಖುಷಿಯಾಗಿ ಸಹಾಯಕ್ಕೆ ಬಂದಳು. ಟಿಪ್ ಟಾಪ್ ಆಗಿ ರೆಡಿಯಾಗಿ ಹೊರಟೆ. ಸಿನೆಮಾ ಶೂಟಿಂಗ್ ಅಲ್ಲದೆ ಇದ್ದಿದ್ದರಿಂದ ಅಲ್ಲಿ ಮೇಕಪ್ ಮಾಡಲು ಯಾರೂ ಇರುವುದಿಲ್ಲ ಎಂದು ನಾನೇ , ರೂಪಾಳ ಸಹಾಯದಿಂದ ಸಾಕಷ್ಟು ಬಣ್ಣ ಬಳಿದುಕೊಂಡು ರೆಡಿಯಾಗಿ ಕ್ಯಾಬ್ ಕರೆದು ಸಮಯಕ್ಕೆ 30 ನಿಮಿಷ

ಮೊದಲೇ ತಲುಪಿದೆ. ಚಿಕ್ಕ ರೂಮು, ಬರೀ ತಾರುಗಳು, 3 ದೊಡ್ಡ ಸ್ಕ್ರೀನ್ ಮಾನಿಟರ್ಗಳು, 4 ದೊಡ್ಡ ಸೈಜಿನ ದೀಪಗಳು, 2–3 ಲ್ಯಾಪ್ಟಾಪುಗಳು, ಹಸಿರು ಬಣ್ಣದ ತೆರೆಯ ಹಿನ್ನಲೆಯಲ್ಲಿ ಆಗಲಿರುವ ಶೂಟಿಂಗ್.

ಎತ್ತರದ ಖುರ್ಚಿಯೊಂದು ರೆಡಿಯಾಗಿತ್ತು. ಆಸೀನಳಾಗಲು ಹೋದವಳನ್ನು ಅಲ್ಲಿ ಲೈಟ್ ಸೆಟ್ ಮಾಡುತ್ತಾ ಇದ್ದವನು ತಡೆದ. ಕಾಫೀ ರೂಮಿನಲ್ಲಿ ಟೀ, ಕಾಫಿ ಏನಾದರೂ ಕುಡಿದು ಬನ್ನಿ ಮಾಡಮ್, ಅಷ್ಟರಲ್ಲಿ ಇವೆಲ್ಲವನ್ನೂ ರೆಡಿ ಮಾಡುತ್ತೇವೆ ಅಂದರು. ಸರಿ , ಎಂದು ಅವನು ತೋರಿಸಿದ ದಿಕ್ಕಿನಲ್ಲಿ, ಆಫೀಸಿನ ಮೂಲೆಯಲ್ಲಿದ್ದ ರೂಮಿಗೆ ಹೋದೆ. ಕಾಫೀ ಮಷೀನ್, ಟೀ, ಕಾಫಿ ಯಥೇಚ್ಛವಾಗಿ , ಖರ್ಚಿಲ್ಲದೆ ಕುಡಿಯುವ ವ್ಯವಸ್ಥೆ. ಬಿಸಿ, ನೊರೆ ನೊರೆಯಾಗಿರುವ ಕಾಫೀ ಕಪ್ ಹಿಡಿದು ಅಲ್ಲಿಯೇ ಇದ್ದ ಸೋಫಾ ಮೇಲೆ ಕುಳಿತು ಮುಖಪುಟದಲ್ಲಿರುವ ನಿಲುಮೆಗಳು, ಫೋಟೋಗಳು ನೋಡುತ್ತಾ ನಾ ಬಂದ ಕೆಲಸವನ್ನೇ ಮರೆತು ಕುಳಿತುಬಿಟ್ಟೆ. ವರ್ಣರಂಜಿತ ಪಟಗಳು, ಗಂಡ–ಹೆಂಡಿರ ಪ್ರೀತಿ–ಪ್ರೇಮವನ್ನು ಜಗತ್ತಿಗೆ ಸಾರುವ ವಾರ್ಷಿಕೋತ್ಸವದ ಪೋಸ್ಟುಗಳು, ಟೂರ್ ವಿವರಗಳು ಹೀಗೆಲ್ಲಾ ನೋಡುತ್ತಾ ಮೈ ಮರೆತು ಮತ್ತಿನ್ನೆರಡು ಕಪ್ ಕಾಫಿ ಕುಡಿಯುವಷ್ಟರಲ್ಲಿ ಲೈಟ್ ಹುಡುಗ (ಬಾಯ್) ಬಂದು ಕರೆದ. ಆಗಲೇ ಅರಿವಾಗಿದ್ದು ಸುಮಾರು 2 ಗಂಟೆಗಳು ಸರಿದು ಹೋಗಿವೆ ಎಂದು! ಮುಖಪುಟದ ಮಾಯೆ ಎಂದು ಮತ್ತೊಮ್ಮೆ ಲಿಪ್ಸ್ಟಿಕ್ ತೀಡಿ ಎದ್ದೆ. ಓದಬೇಕಾದ ಅಂಶಗಳು ಮೊದಲೇ ಸಿದ್ಧವಾಗಿತ್ತು. ಒಂದೆರಡು ಲೈನ್ ಓದುವಷ್ಟರಲ್ಲಿ ಬೆವರು ಕಿತ್ತು ಬಂತು. ಹೇಗೋ ಮಾಡಿ ಒಂದೈದು ಲೈನ್ ಓದಿ ಮುಗಿಸಿದ ಮೇಲೆ "ಕಟ್" ಅಂದರು. ತುಂಬಾ ತಡವರಿಸಿದಿರಿ, ಮಧ್ಯೆ ಮಧ್ಯೆ ಉಚ್ಚಾರಣೆ ಸರಿ ಇರಲಿಲ್ಲ, ಕ್ಯಾಮೆರಾ ಕಡೆ ನೋಡುತ್ತಾ ಇರಲಿಲ್ಲ, ನಿಮ್ಮ ಕಣ್ಣುಗಳು ಅತ್ತಿತ್ತ ನೋಡುತ್ತಿದ್ದವು, ಏಕಾಗ್ರತೆ ಇರಲಿಲ್ಲ, ಭಯದಿಂದ ಹೇಳುತ್ತಿರುವ ಹಾಗೆ ಇತ್ತು...ಹೀಗೆ ಟೀಕೆಗಳ ಮಹಾಪೂರವೇ ಹರಿದು ಬಂತು.ವಿದ್ಯಾರ್ಥಿಗಳ ಮುಂದೆ ಪಾಠ ಮಾಡುವುದೇ ಬೇರೆ , ಇಲ್ಲಿ ಕ್ಯಾಮೆರಾ ಎದುರಿಸುವುದು ಬೇರೆ ಎಂದು ಮನದಟ್ಟಾಯಿತು. ರೂಪಾಳಿಗೆ ಫೋನು ಮಾಡಿದಾಗ ಮೂಗು ಮುರಿದಳು." ಅದಕ್ಕೆ ಹೇಳುವುದು, ನನ್ನ ಮೇಲೆ ಡಿಪೆಂಡ್ ಆಗದೆ, ನೀವೇ ಇಂಟರ್ನೆಟ್ ಇತ್ಯಾದಿ ಯೂಸ್ ಮಾಡಿ ಎಂದು. ಆಗ ನಿಮಗೆ ಆತ್ಮವಿಶ್ವಾಸ ಹೆಚ್ಚುತ್ತಿತ್ತು. ಹಾ, ಇಂಟರ್ನೆಟ್ ಅಂದರೆ "ಫೇಸ್ಬುಕ್ " ಅಲ್ಲ" ಎಂದು ಭಾಷಣ ಶುರುಮಾಡಿದವಳ ಮೇಲೆ ಸಿಟ್ಟು ಬಂದು ಫೋನ್ ಇಟ್ಟೆ. ಮತ್ತೆ ಮತ್ತೆ ಟೇಕ್, ಕಟ್ ಮಧ್ಯೆ ನಲುಗಿ ಹೋದೆ. ಮಧ್ಯಾಹ್ನ ಊಟದ ಹೊತ್ತು ಮೀರಿತ್ತು. ಬರ್ಗರ್, ಕೋಲಾ ಕುಡಿಯುತ್ತಾ, ನನ್ನನ್ನು ಟೀಕಿಸುತ್ತಾ ಕ್ಯಾಮೆರಾ ಚಲಾಯಿಸುವ ಮಂದಿಗೆ ಹಸಿವಿದ್ದಂತಿರಲಿಲ್ಲ.


"ಊಟ ಮಾಡಿ ಬರುವೆ" ಎಂದು ಅಲ್ಲಿಂದ ಎಸ್ಕೇಪ್ ಆಗಿ, ಹೊರಬಂದು, ಆಟೋ ಹಿಡಿದು, ಸೀದಾ ಮನೆಗೆ ಬಂದೆ. ನನ್ನ ವಿದ್ಯಾರ್ಥಿಗೆ ಕರೆ ಮಾಡಿ ದೊಡ್ಡ ನಮಸ್ಕಾರ ಹೇಳಿದೆ. ಅಸಮಾಧಾನ ಉಕ್ಕುತ್ತಿದ್ದ ಅವನ ಕರೆ ಕಟ್ ಮಾಡಿ ರೂಪಾಳಿಗೆ ಬರ ಹೇಳಿದೆ. ಮೇಕಪ್ ಅಳಿಸುವ ಮುನ್ನ ಟೆರೇಸ್ ಅಲ್ಲಿ ಒಂದಷ್ಟು ಫೋಟೋ ತೆಗೆದು ಲೇಡೀಸ್ ಗ್ರೂಪಿನಲ್ಲಿ ಹಾಕುವಾ ಎಂದು!

■

# ಪುಸ್ತಕ ಪರಿಚಯ – ಸ್ವರ್ಗ ಲೋಕಕ್ಕೊಂದು ಸರ್ಪ್ರೈಸ್ ವಿಸಿಟ್

ಲೇಖಕರು : **ಎಚ್.ಆರ್ .ಹನುಮಂತರಾವ್**

ಪ್ರಕಾಶಕರು: **ಶ್ರೀನಿವಾಸ ಪುಸ್ತಕ ಪ್ರಕಾಶನ.**




ಅಪರಂಜಿ ಬಳಗದ ಲೇಖಕರಾಗಿರುವ ಶ್ರೀಯುತ ಹನುಮಂತರಾಯರು ನಮ್ಮ ಓದುಗರಿಗೆ ಹೊಸಬರೇನಲ್ಲ. ಕಳೆದ ಎರಡು ದಶಕಗಳಿಂದ ಶ್ರೀಯುತರು ಅಪರಂಜಿಗೆ ಅನೇಕ ಉತ್ತಮ ನಗೆಲೇಖನಗಳನ್ನು ನೀಡಿದ್ದಾರೆ. ಇವರ ಮುಂಚಿನ ಪುಸ್ತಕ, "ಬರಹಗಾರನ ಬವಣೆ"ಯಂತೆಯೇ ಈ ಸಂಗ್ರಹವೂ ಸಹಾ ಚೆನ್ನಾಗಿ ಓದಿಸಿಕೊಂಡು ಹೋಗುತ್ತದೆ. ಈ ಪುಸ್ತಕದ ಮುನ್ನುಡಿಯಲ್ಲಿ (ಅದನ್ನು ಜೇನ್ನುಡಿ ಎಂದು ಹೆಸರಿಸಿದೆ) ಬೇಲೂರರು ಹೀಗೆ ಹೇಳುತ್ತಾರೆ.

"..ಹಾಸ್ಯ ಸಂಕಲನಗಳಾಗಲೀ, ಲಘು ಪ್ರಬಂಧಗಳ ಸಂಕಲನಗಳಾಗಲೀ, ಅಥವಾ ಬಿಡಿ ಬರಹಗಳಾಗಲೀ ಓದಿ ಮುಗಿಸಿದೊಡನೆ ಮನದಲ್ಲಿ ಒಂದು ರಮ್ಯ ಅನುಭವ ಉಂಟಾಗಬೇಕು. ಹಾಗಾದಾಗ ಆ ಕೃತಿ ಯಶಸ್ವಿಯಾಯಿತು ಎಂದರ್ಥ" ಬೇಲೂರರ ಈ ಅಭಿಪ್ರಾಯವನ್ನು ಅತ್ಯುತ್ತಮವಾಗಿ ಸಾಕಾರಗೊಳಿಸಿರುವ ಪುಸ್ತಕ ಈ ಸಂಗ್ರಹ.

ಎರಡು ದಶಕಗಳಷ್ಟು ಹನುಮಂತರಾಯರು ನಮ್ಮ ಪತ್ರಿಕೆಗೆ ಬರೆಯಲು ಪ್ರಾರಂಭಿಸಿದಾಗಿನಿಂದ ನನಗೆ ಅವರ ಪರಿಚಯ. ಸರಳ ಸಜ್ಜನ ವ್ಯಕ್ತಿಯಾಗಿರುವ ಇವರೊಂದಿಗಿನ ಪರಿಚಯ, ಸ್ನೇಹವಾಗಿ ತಿರುಗಲು ಬಹಳ ಕಾಲವೇನೂ ಬೇಕಾಗಲಿಲ್ಲ. ಇವರ ಸ್ನೇಹಪರತೆ, ನಗುಮನೋಭಾವಗಳು ಈ ಸಂಕಲನದ ಬರಹಗಳಲ್ಲಿ ಹಾಸುಹೊಕ್ಕಾಗಿ ಮೂಡಿಬಂದಿವೆ. ಬೇಲೂರರು ಹೇಳಿರುವಂತೆ ಇಲ್ಲಿನ ಅನೇಕ ಲೇಖನಗಳಲ್ಲಿ ಆಂಗ್ಲ ನಗೆಗಾರ ವುಡ್‌ಹೌಸ್‌ನ ಶೈಲಿಯನ್ನು ಕಾಣಬಹುದು. ಆನಂದ ವಿಹಾರ ಕ್ಲಬ್ ಸರಣಿಯ ಲೇಖನಗಳು ನಿಜಕ್ಕೂ ದಣಿದ ಮನಗಳಿಗೆ ಮುದ ನೀಡಬಲ್ಲವು.

ಈ ಸಂಕಲನದ ಪ್ರತಿಯೊಂದು ಬರಹವನ್ನು ವಿವರಿಸಿ ಓದುಗರನ್ನು ವಂಚಿಸುವುದು ಸರಿಯಲ್ಲ. ಎಲ್ಲ ಲೇಖನಗಳೂ ಬಹು ಸುಸಂಸ್ಕೃತ ಶೈಲಿಯಲ್ಲಿದ್ದು ನಗುವಿನೊಂದಿಗೆ ಸಮಾಜದ ಹುಳುಕುಗಳ ಬಗ್ಗೆ ಗಾಢವಾಗಿ ಚಿಂತಿಸುವಂತೆಯೂ ಪ್ರಚೋದಿಸುತ್ತವೆ.

ಶ್ರೀಯುತರ ಲೇಖನಿಯಿಂದ ಇಂತಹ ಇನ್ನೂ ಅನೇಕ ಸೃಜನಶೀಲ ಕೃತಿಗಳು ಮೂಡಿಬರಲಿ ಎಂದು ಅಪರಂಜಿ ಹಾರೈಸುತ್ತಾಳೆ. ■

---

# ಓದುಗರಿಗೊಂದು ಸವಾಲು – ಸರಿಯುತ್ತರ

**1-E, 2-J , 3-A, 4-I, 5- H, 6-L, 7- D, 8- K, 9- C, 10- F, 11- B, 12- G**